ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 9 ಮಾರ್ಚ್ 2, 1986 ಬೆಲೆ 60 ಪೈಸೆ

12 ವಿರೋಧ ಪಕ್ಷಗಳ ಕರೆ :
ದೇಶದೆಲ್ಲೆಡೆ ಜನಸಮೂಹದ ಪ್ರತಿಭಟನೆಯ ಪ್ರತೀಕ
'ಭಾರತ ಬಂದ್'ನ ಅಪೂರ್ವ ಯಶಸ್ಸು

ಕಲ್ಕತ್ತಾದಲ್ಲಿ ಸಮಾವೇಶಗೊಂಡಿದ್ದ ಪಕ್ಷದ ಹನ್ನೆರಡನೆಯ ಅಧಿವೇಶನದ ರಾಜಕೀಯ ನಿರ್ಣಯವನ್ನು ಇಂದು ನಾವೆಲ್ಲರೂ ಮತ್ತೆ ನೆನಪಿಸಿಕೊಳ್ಳಬೇಕಾಗಿದೆ. ಆ ಮಾತುಗಳನ್ನು ಮನನ ಮಾಡಿಕೊಂಡು ಕಾರ್ಯಚಟುವಟಿಕೆಗಳನ್ನು ಕೈಗೊಂಡರೆ ಎಂತಹ ಅಪ್ರತಿಮ ಪರಿಣಾಮ ಉಂಟಾಗುತ್ತದೆ ಎಂಬುದಕ್ಕೆ 12 ವಿರೋಧ ಪಕ್ಷಗಳ ಒಕ್ಕೊರಲ ಕರೆ "ಅಖಿಲ ಭಾರತ ಬಂದ್" ಕರೆ ನೀಡಿದ ಎಡೆಯಲ್ಲೆಲ್ಲಾ ಅಪೂರ್ವ ಯಶಸ್ಸು ಪಡೆದುದೇ ಸಾಕ್ಷಿ. ಕಲ್ಕತ್ತಾ ನಿರ್ಣಯ ಹೇಳುತ್ತದೆ–

"ಜಾತ್ಯಾತೀತ ವಿರೋಧ ಪಕ್ಷಗಳು ಕಳೆದ ಚುನಾವಣೆಯ ಸೋಲಿನ ಅಘಾತದಿಂದ ಇನ್ನೂ ಚೇತರಿಸಿಕೊಂಡಿಲ್ಲ.... ವಿರೋಧ ಪಕ್ಷಗಳ ಕೆಲವು ಮುಖಂಡರು ಕಾಂಗ್ರೆಸ್ (ಐ) ಹಾಗೂ ಕೇಂದ್ರ ಸರ್ಕಾರದೊಂದಿಗೆ ರಾಜೀ ಮಾತುಕತೆಯ ನಿಲುವು ತಳೆದಿದ್ದಾರೆ. ಕಾಂಗ್ರೆಸ್ [ಐ] ಕೂಡ ವಿರೋಧ ಪಕ್ಷಗಳನ್ನು ಸಹಸಮ್ಮತಿ, ವಿರೋಧ ಪಕ್ಷಗಳೊಡನೆ ಸಲಹೆ, ವಿನಿಮಯ ಎಂದೆಲ್ಲಾ ಹೇಳುತ್ತಾ ಆಕರ್ಷಿಸಲು ಯತ್ನಿಸುತ್ತಿದೆ ಎಡಪಂಥಿಯರನ್ನು ಪ್ರತ್ಯೇಕಿಸುವುದೇ ಇದರ ಉದ್ದೇಶವಾಗಿದೆ." 85–86ರ ಬಜೆಟ್ ಹಾಗೂ ನಂತರದಲ್ಲಿ ರಾಜೀವಗಾಂಧಿಯವರು ಮಂಡಿಸಿದ ನವ ಆರ್ಥಿಕ ನೀತಿಯ ಪ್ರಣಾಲಿಕೆಯ ವಿರುದ್ಧ ದೇಶಾದ್ಯಂತ ಸಿಪಿಐ [ಎಂ] ಒಂದೇ ಬಜೆಟ್ ವಾರಾಚಾರಣೆಯ ಮೂಲಕ ಪ್ರತಿಭಟಿಸುವ ಅವಶ್ಯಕತೆ, ಬಂತು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ಏಳನೇ ಯೋಜನೆಯ ಅಂಗೀಕಾರದಲ್ಲಿ ಕಾ|| ಜ್ಯೋತಿ ಬಸು, ನೃಪೇನ್ ಚಕ್ರವರ್ತಿ ಇವರುಗಳನ್ನು ರಾಜೀವಗಾಂಧಿಯವರು 'ಏಳನೇ ಯೋಜನೆಯಿಂದ ಬೇಕಾದರೆ ಹೊರಗೆ ಹೋಗಿ' ಎಂದು ಹೇಳುವ ದಾಷ್ಟ್ಯತೆ ತೋರಿಸಿದರು.

ಆದರೆ ನಮ್ಮ ಪಕ್ಷದ ನಿರ್ಣಯ ಹೇಳಿದೆ "ಅದೇನೆ ಇದ್ದರೂ ಕೇಂದ್ರ ರಾಜ್ಯ ಸಂಬಂಧಗಳ ಮಹತ್ವದ ಪ್ರಶ್ನೆಯಲ್ಲಿ, ಜನತೆಯ ಮೇಲೆ ವಿಪರೀತ ಬೆಲೆ ಏರಿಕೆ ಪ್ರಶ್ನೆಯಲ್ಲಿ, ಪ್ರಜಾಪ್ರಭುತ್ವ, ಸ್ವಾತಂತ್ರ್ಯ ಮತ್ತು ಹಕ್ಕುಗಳ ಪ್ರಶ್ನೆಯಲ್ಲಿ ವಿರೋಧ ಪಕ್ಷಗಳು ಜನತೆಯನ್ನು ಸಮರ್ಥಿಸುತ್ತವೆ."

ಮತ್ತೆ ನೋಡಿ, ಅದೇ ನಿರ್ಣಯ ಮುಂದುವರೆದು "ಕೆಲವು ನಿರ್ದಿಷ್ಟ ಸಮಸ್ಯೆಗಳ ಮೇಲೆ ಈ ಪಕ್ಷಗಳೊಂದಿಗೆ ಪ್ರತಿ ಭಟನೆಗಳು ವ್ಯಾಪಕ ಜನ ವಿಭಾಗಗಳನ್ನು ಬಡಿದೆಬ್ಬಿಸುತ್ತವೆ." ಎಂದಿದೆ

ಇದಕ್ಕೆದ್ದಂತೆ ಕೇಂದ್ರ ಸರ್ಕಾರ ಅಡಳಿತಾತ್ಮಕವಾಗಿ ಏರಿಸಿದ ಬೆಲೆಗಳ ಪ್ರಶ್ನೆಯಲ್ಲಿ 14 ವಿರೋಧ ಪಕ್ಷಗಳು ಕೂಡಿ ಪಾರ್ಲಿಮೆಂಟಿನ ಮುಂದೆ ಪ್ರತಿಭಟಿಸುದುದರಲ್ಲಿ, 12 ವಿರೋಧ ಪಕ್ಷಗಳು ಸಂಘಟಿಸಿದ ಅಖಿಲ ಭಾರತ ಬಂದ್‌ನ ಯಶಸ್ಸಿನಲ್ಲಿ ಈ ಮಾತಿನ ನಿಜ ಎದ್ದು ಕಾಣುತ್ತದೆ.

(8ನೇ ಪುಟ ನೋಡಿ)

ಅಖಿಲ ಭಾರತ ಬಂದ್‌ನ ಭಾಗವಾಗಿ
ಯಶಸ್ವೀ ಕರ್ನಾಟಕ ಬಂದ್

ಕರ್ನಾಟಕದಲ್ಲಿ ಸಿ ಪಿ ಐ (ಎಂ), ಸಿ ಪಿ ಐ, ಜನತಾ, ಭಾ ಜ ಪ ಪಕ್ಷಗಳು ಕರೆನೀಡಿದ ಕರ್ನಾಟಕ ಬಂದ್ ರಾಜ್ಯಾದ್ಯಂತ ಅಪೂರ್ವ ಯಶಸ್ಸನ್ನು ಪಡೆಯಿತು. ರಾಜಧಾನಿ ಬೆಂಗಳೂರಿನಲ್ಲಿ, ಮೈಸೂರು, ಹುಬ್ಬಳ್ಳಿ-ಧಾರವಾಡ ಮಂಗಳೂರು, ತುಮಕೂರು, ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಹರಿಹರ, ದಾಂಡೇಲಿ, ಬೆಳಗಾಂ, ಹಾಸನ, ಸಕಲೇಶಪುರ, ಚಿಕ್ಕಮಗಳೂರು, ಮೂಡಿಗೆರೆ, ಮೊದಲಾದ ಎಲ್ಲಾ ನಗರಗಳಲ್ಲಿ ಬಂದ್ ಯಶಸ್ವಿಯಾಯಿತು ಕಾರಖಾನೆಗಳಲ್ಲಿ ಮುಷ್ಕರ, ರಾಜ್ಯ ಸರ್ಕಾರಿ ಕಛೇರಿಗಳ, ಕೇಂದ್ರ ಸರ್ಕಾರಿ ಕಛೇರಿಗಳ ನೌಕರರ ಮುಷ್ಕರ, ಬ್ಯಾಂಕ್, ಎಲ್. ಐ ಸಿ. ಗಳಲ್ಲಿ ಮುಷ್ಕರ ಸಂಪೂರ್ಣ ಯಶಸ್ವಿಯಾಯಿತು. ರಿಜರ್ವ್ ಬ್ಯಾಂಕ್ ಸ್ಟಾಕ್ ಎಕ್ಸ್‌ಚೇಂಜ್ ಚಟುವಟಿಕೆಗಳು ಸ್ಥಗಿತಗೊಂಡುವು. ಈ ಬಂದ್‌ನಲ್ಲಿ ಪಕ್ಷದ ಸಂಗಾತಿಗಳು, ಅಭಿಮಾನಿಗಳುಬೇರಾವುದೇ ಪಕ್ಷಕ್ಕಿಂತ ಚಟುವಟಿಕೆಯಿಂದ ಸಕ್ರಿಯವಾಗಿ ಭಾಗವಹಿಸಿ ಬಂದ್ ಯಶಸ್ವಿಗೊಳಿಸುವುದಕ್ಕಾಗಿ ದುಡಿದದ್ದು ಕಂಡು ಬರುತ್ತದೆ.

ಬೆಂಗಳೂರಿನಲ್ಲಿ :

ದಿನಾಂಕ 25ರಂದು ಪಕ್ಷದ ಕಾರ್ಯಕರ್ತರ ಪಂಜಿನ ಮೆರವಣಿಗೆ ನಡೆಸುವುದರೊಂದಿಗೆ, 26ರ ಬೆಳಗಿನ ಜಾವವೇ ಪಕ್ಷದ ಸಂಗಾತಿಗಳು, ಅಭಿಮಾನಿಗಳು ಕೂಡಿ ಅಂಗಡಿ ಮುಂಗಟ್ಟುಗಳನ್ನು ಬಂದ್ ಯಶಸ್ವಿಗೆ ಸಹಕರಿಸುವಂತೆ ಕೇಳುವುದರಲ್ಲಿ, ಬಸ್‌ಸ್ಟ್ಯಾಂಡ್ ಬಿಟ್ಟು ಹೊರಟ ಕೆ ಎಸ್. ಆರ್. ಟಿ ಸಿ. ಬಸ್‌ಗಳನ್ನು ತಡೆಹಾಕಿ ಹಿಂದಿರುಗಿಸುವುದರಲ್ಲಿ ತೊಡಗಿದರು. ವಿಸ್ತರಣಗಳಲ್ಲಿ ಅಲ್ಲಲ್ಲಿ ಸಣ್ಣಪುಟ್ಟ ಅಂಗಡಿ ಹೋಟೆಲ್‌ಗಳ ಹೊರತು ಎಲ್ಲಾ ಕಡೆ ಪ್ರಮುಖ ಅಂಗಡಿಗಳು ಮುಚ್ಚಿದ್ದವು.

ಬಂಧನಗಳು :

ಪಕ್ಷದ ನೇತೃತ್ವದಲ್ಲಿ ಅನೇಕ ಕಡೆ ಮೆರವಣಿಗೆಗಳು ನಡೆದು ಬಂದ್‌ಗೆ ಜನರ ಬೆಂಬಲ ಕೋರಲಾಯಿತು, ಪಕ್ಷದ ಕಛೇರಿಯಿಂದ ಹೊರಟ ಒಂದು ಮೆರವಣಿಗೆ ನಗರದ ವಾಣಿಜ್ಯ ಕೇಂದ್ರಗಳಾದ ಕೆಂಪೆಗೌಡ ವೃತ್ತದ ಸುತ್ತ, ಸಿಟಿಮಾರ್ಕೆಟ್, ಕಲಾಸಿಪಾಳ್ಯಗಳಲ್ಲಿ ಸಂಚರಿಸಿ ಚಾಮರಾಜಪೇಟೆಯನ್ನು ಪ್ರವೇಶಿಸಿದಾಗ ಪೋಲಿಸರು 35 ಜನರನ್ನು ಬಂಧಿಸಿದರು.

ಯುನೈಟೆಡ್ ಬ್ರೂವರೀಸ್ ಕಾರ್ಖಾನೆಯ ಮುಂದೆ ಮತ ಪ್ರದರ್ಶನದಲ್ಲಿ ಬಂದ್‌ಗೆ ಸಹಕಾರ ಕೇಳುವುದರಲ್ಲಿ ತೊಡಗಿದ್ದ ಕಾರ್ಮಿಕರ ಮೇಲೆ ಲಾಠಿ ಪ್ರಹಾರವಾಗಿ 5–6 ಜನ ತೀವ್ರ ಗಾಯಗೊಂಡರು. ಪೋಲಿಸರು ಕೃಷ್ಣಪ್ಪ ಎಂಬುವರನ್ನು ಬಂಧಿಸಿ, ಹಿಂಸಿಸಿದ್ದನ್ನು ಪ್ರತಿಭಟಿಸಿ ಯು ಬಿ ಯ 200 ಮಂದಿ ಕಾರ್ಮಿಕರು ಮೆರವಣಿಗೆ ಮಾಡಿ ಪೋಲೀಸ್ ಕಮೀಷನರ್‌ರವರಿಗೆ ಮನವಿ ಮಾಡಿದರು.

ಕೃಷ್ಣರಾಜಪುರದಲ್ಲಿ ಯಶವಂತಪುರದಲ್ಲಿ ಸಿ ಐ ಟಿ ಯು ಕಾರ್ಮಿಕ ಸಂಘಗಳ ಕಾರ್ಮಿಕರು, ಮೆರವಣಿಗೆ ಮಾಡಿದರು. ದೊಡ್ಡಬಳ್ಳಾಪುರ ಸಂಪೂರ್ಣ ಬಂದ್ ಆಯಿತು. ಮೆರವಣಿಗೆ, ಬಹಿರಂಗ ಸಭೆ ನಡೆದುವು. ತಲಘಟ್ಟಪುರದಲ್ಲಿ ರಸ್ತೆ ತಡೆ ಹಾಕಲಾಯಿತು.

ದ. ಕ. ಜಿಲ್ಲೆಯಲ್ಲಿ :

ಮಂಗಳೂರು ಕುಂದಾಪುರ, ಉಡುಪಿ, ಬಂಟ್ವಾಳ ಮೊದಲಾದ ಎಲ್ಲ ಪ್ರಮುಖ ಪಟ್ಟಣಗಳಲ್ಲಿಯೂ ಬಂದ್ ಯಶಸ್ವಿಯಾಗಿ ನಡೆಯಿತೆಂದು ವರದಿಯಾಗಿದೆ. ಎಲ್ಲಾ ಸಾರ್ವಜನಿಕ, ಖಾಸಗಿ ವಾಹನ

(8ನೇ ಪುಟ ನೋಡಿ)

27 ಕೈಗಾರಿಕೆಗಳಲ್ಲಿ ಕನಿಷ್ಠ ಕೂಲಿ ಒತ್ತಾಯಿಸಿ
ಮಾರ್ಚ್ 3ರ 'ವಿಧಾನ ಸೌಧ ಚಲೊ' ಯಶಸ್ವಿಗೊಳಿಸಿರಿ

ದೇಶದಲ್ಲಿಯೇ ಅತ್ಯಂತ ದೀನ ಸ್ಥಿತಿಯಲ್ಲಿರುವ, ಬಡತನದ ರೇಖೆಯ ಕೆಳಗಿರುವವರಲ್ಲಿ ಪೂರ್ಣವಾಗಿ ಸೇರಿರುವ ಅತ್ಯಂತ ದುರ್ಭರ ಸ್ಥಿತಿಯಲ್ಲಿರುವ, ಅರಕ್ಷಿತ ಕಾರ್ಮಿಕ, ವರ್ಗ ಕೃಷಿ ಕಾರ್ಮಿಕರೂ ಸೇರಿದ ಅಸಂಘಟಿತ ಕಾರ್ಮಿಕ ವರ್ಗ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು, ಬಾಲ ಕಾರ್ಮಿಕರು ದಯನೀಯ ಸ್ಥಿತಿಯಲ್ಲಿ ದುಡಿಯುತ್ತಿರುವುದು ಈ ಕೈಗಾರಿಕೆಗಳಲ್ಲಿಯೇ. ಅತ್ಯಂತ ಹೆಚ್ಚಿನ ಅಪೌಷ್ಟಿಕ ಪೋಷಕಾಂಶಗಳ ಕೊರತೆಯಿಂದ, ವೃತ್ತಿ ಸಂಬಂಧ ರೋಗಗಳಿಂದ ಬಳಲುವ ಜನ ಇರುವುದು ಈ ವರ್ಗದಲ್ಲಿಯೇ.

ಅಸಂಘಟಿತರು ಎನ್ನುವ ಕಾರಣಕ್ಕಾಗಿಯೇ ಅರಕ್ಷಿತರಾದ ಈ ಕಾರ್ಮಿಕ ವರ್ಗದ ಸಲುವಾಗಿ ತಾವು ಏನನ್ನೂ ಮಾಡದಿದ್ದರೂ, ಈ ಕಾರ್ಮಿಕ ವರ್ಗದ ಪ್ರಶ್ನೆಯನ್ನೆತ್ತುವುದು, ಇವರ ಹೆಸರೆತ್ತಿ ಸಂಘಟಿತ ಕಾರ್ಮಿಕ ವರ್ಗದ ಹಕ್ಕುಗಳ ಮೇಲೆ ಧಾಳಿ ಮಾಡಲು ಹೋರಾಟಗಳನ್ನು ಮುರಿಯಲು ಇಂದಿರಾಗಾಂಧಿಯವರಿಂದ ಹಿಡಿದು ಉದ್ಯಮಿಗಳ ಸಂಘಗಳು, ಏಕಸ್ವಾಮ್ಯ ಬಂಡವಾಳಗಾರರು ಮಾತ್ರವೇ ಅಲ್ಲ ಇತ್ತೀಚಿಗೆ ರಾಮಕೃಷ್ಣ ಹೆಗ್ಗಡೆಯವರೂ ಸೇರಿ ಅನೇಕ ಜನ ಆಳುವ ವರ್ಗದ ರಾಜಕಾರಣಿಗಳು, ಬಂಡವಾಳಿಗರು, ಅರ್ಥಶಾಸ್ತ್ರಜ್ಞರು ಪ್ರಯತ್ನ ಮಾಡುತ್ತಿದ್ದಾರೆ. ಬಿಕ್ಕಟ್ಟಿನಲ್ಲಿ ಮುಳುಗಿರುವ, 88,000 ಸಣ್ಣ ಕೈಗಾರಿಕೆಗಳು, 490 ದೊಡ್ಡ ಕೈಗಾರಿಕೆಗಳು ಮುಚ್ಚಿರುವ ನಮ್ಮ ಆರ್ಥಿಕದಲ್ಲಿ 1 ಕೋಟಿ ಜನ ಇರುವ ಅಸಂಘಟಿತ ಕಾರ್ಮಿಕರ ಕೂಲಿ ಹೆಚ್ಚಿಸಿಕೊಳ್ಳುವ ಶಕ್ತಿಯನ್ನು ಹೆಚ್ಚಿಸಿದರೆ ಇಡೀ ಆರ್ಥಿಕತೆ ಸುಧಾರಿಸುತ್ತದೆ. ಎಂಬುದರಲ್ಲಿ ಸಂದೇಹವೇ ಇಲ್ಲ.

ಅಸಂಘಟಿತ ಕಾರ್ಮಿಕ ವರ್ಗವನ್ನು ಸಂಘಟಿಸಬೇಕೆನ್ನುವುದು ಅವರನ್ನು ಹೋರಾಟದ ಸಾಗರಕ್ಕೆ ಎಳೆಯಬೇಕೆನ್ನುವುದು. ಅವರ ಹಿತಗಳನ್ನು ರಕ್ಷಿಸಬೇಕೆನ್ನುವುದು ಸಿಪಿಐ (ಎಂ) ನ ಗುರಿ. ಈ ಗುರಿಗಾಗಿ ದುಡಿಯುತ್ತಾ, ಬಂದಿರುವ ಪಕ್ಷ, ಹಾಗೂ ಸಿಐಟಿಯು ಬೀಡಿ, ಪ್ಲಾಂಟೇಶನ್, ಹೆಂಚು, ಪ್ಲೈವುಡ್, ಕಾಫಿಕ್ಯೂರಿಂಗ್, ಗೇರು ಬೀಜ, ಹೆಂಡ ಇಳಿಸುವುದು, ಕೈಮಗ್ಗ ಇತ್ಯಾದಿ ಕಾರ್ಖಾನೆಗಳಲ್ಲಿನ ಕಾರ್ಮಿಕರನ್ನು ಸಂಘಟಿಸಿ ಹೋರಾಟಕ್ಕಿಳಿಸುವುದರಲ್ಲಿ ಎಲ್ಲರಿಗಿಂತ ಮುಂದಿದೆ.

ಕನಿಷ್ಠ ಕೂಲಿಗಾಗಿ ಸಿ ಐ ಟಿ ಯು ಯತ್ನ

ಹಿಂದಿನ ರಾಜ್ಯ ಕಾಂಗ್ರೆಸ್ (ಐ) ಸರಕಾರಗಳು, ಈಗಿನ ಜನತಾ ಸರಕಾರ, ಅಸಂಘಟಿತ ಕಾರ್ಮಿಕರ ಅಗ್ಗದ ಬೆಲೆಯಲ್ಲಿ ದೊರಕುವ ಶ್ರಮವನ್ನು ಶೋಷಣೆ ಮಾಡಿ ಕೋಟ್ಯಾಂತರ ರೂ ಲಾಭ ಗಳಿಸಲು ಅವಕಾಶ ನೀಡಿವೆ. ಅಸಂಘಟಿತ ಕಾರ್ಮಿಕರಿಗೆ

[8ನೇ ಪುಟ ನೋಡಿ]

ಒಳಗೇನಿದೆ....

ಜನತಾ ಸರ್ಕಾರದ 86-87 ರ ಬಜೆಟ್

ಹಳ್ಳಿಯನ್ನು ನಗರದ ಮೇಲೆ ಎತ್ತಿಕಟ್ಟುವ ಪ್ರವೃತ್ತಿ

ಹಿಂದಿನ ವರ್ಷದ ಬಜೆಟ್‌ನಲ್ಲಿ ರಾಮಕೃಷ್ಣ ಹೆಗ್ಗಡೆಯವರು "ಆರ್ಥಿಕ ಅಭಿವೃದ್ಧಿಯ ಇಡೀ ಹಾದಿಯಲ್ಲಿ ನಾವು ಜನತಾ ವಲಯವನ್ನು ಮರೆತಿದ್ದೇವೆ. ಇನ್ನು ಮುಂದಾದರೂ "ಜನತಾ ವಲಯ" ಅಭಿವೃದ್ಧಿಯ ಕೇಂದ್ರವಾಗಬೇಕು" ಎಂದು ಘೋಷಿಸಿ ಬಡವರಿಗೆ ಎರಡು ರೂಪಾಯಿಗೆ ಅಕ್ಕಿ, ಗೋಧಿ, ರಾಗಿ ಹಾಗೂ ಅಗ್ಗದ ಬೆಲೆಗೆ ಸೀರೆ, ಧೋತಿ ಇತ್ಯಾದಿ ಯೋಜನೆಗಳನ್ನು ಜಾರಿಗೆ ತರುತ್ತೇನೆ ಎಂದು ಹೇಳಿದ್ದರು ಆದರೆ ಬೇರೆಯವರೆಲ್ಲಾ ಇಲ್ಲಿಯವರೆಗೂ ಮರೆತಿದ್ದರು ಎಂದು ದೂಷಿಸಿದ ಹೆಗ್ಗಡೆಯವರೇ ಈ ಜನತಾ ವಲಯವನ್ನು ಒಂದೇ ವರ್ಷದಲ್ಲಿ ಮರೆತುಬಿಟ್ಟರೇಕೆ ? ಈ ಯೋಜನೆಗಳ ಅಸಂಖ್ಯಾತ ಲೋಪವನ್ನು ಸರಿಪಡಿಸುವ ಬಗ್ಗೆ, ಅದನ್ನು ವಿಸ್ತರಿಸುವ ಬಗ್ಗೆ ಚಕಾರವೇ ಇಲ್ಲ.

ಬೇಧ ಭಾವದ ಕಾಳವಿಷ

ಆದರೆ ಜನತಾ ವಲಯದ ಮಾತನಾಡುತ್ತಲೇ ಜನರಿಗೆ ಅವರು ಉಣಿಸಬಯಸಿದ ಕಾಳವಿಷ, ಬೇಧ ಭಾವದ ವಿಷ, ಸಂಘಟಿತ ಕಾರ್ಮಿಕರ ಮೇಲೆ ಅಸಂಘಟಿತರನ್ನು, ನಿರುದ್ಯೋಗಿಗಳನ್ನು, ನೀರಾವರಿಯ ರೈತರ ಮೇಲೆ ಒಣ ಬೇಸಾಯದ ರೈತರನ್ನು ಎತ್ತಿ ಕಟ್ಟುವ, ವೈರವನ್ನು ಬಿತ್ತುವ ವಿಷ ಮಾತ್ರ ಇನ್ನಷ್ಟು ತೀವ್ರವಾಗಿದೆ. ಹಳ್ಳಿ-ನಗರಗಳ ನಡುವೆ ರೈತರು ಕಾರ್ಮಿಕರ ನಡುವೆ ತಂದಿಕ್ಕುವ ರೂಪ ತಳೆದಿದೆ. ಬಂಡವಾಳಶಾಹಿವರ್ಗದ ಮುಖವಾಣಿ ರಾಮಕೃಷ್ಣ ಹೆಗ್ಗಡೆಯವರು ಎಂಬ ನಗ್ನ ಸತ್ಯವನ್ನು ಬಯಲಿಗೆಳೆದಿದೆ.

ಹಳ್ಳಿ-ನಗರಗಳ ನಡುವೆ ಸಂಘಟಿತ-ಅಸಂಘಟಿತರ ನಡುವೆ ಬೇಧ ಬಿತ್ತುವ ಪ್ರಯತ್ನ ಹೊಸದೇನಲ್ಲ. ಕೋತಿ ತಾನು ತಿಂದು ಮೇಕೆಯ ಗಡ್ಡಕ್ಕೊರಸಿ, ಮೇಕೆಯನ್ನು ಬಲಿಪಶುವಾಗಿಸುವ ಬಂಡವಾಳಶಾಹಿ ಕುತಂತ್ರ ಬಹಳ ಹಳೆಯದು, ಬಹುಶಃ ಬಂಡವಾಳಶಾಹಿಯ ಮೊದಲ ಬಿಕ್ಕಟ್ಟಿನ ಜೊತೆಯಲ್ಲಿಯೇ ಹುಟ್ಟಿದುದು ಮುಗ್ಗಟ್ಟು ತೀವ್ರವಾಗುತ್ತಾ ತನ್ನ ಲಾಭಕ್ಕೆ ಹೊಡೆತ ಬರುವಾಗ, ಅದನ್ನು ರಕ್ಷಿಸಿಕೊಳ್ಳಲು, ಸೂಪರ್ ಲಾಭ ಪಡೆಯಲು, ಬಂಡವಾಳಶಾಹಿಗೆ ಒಂದು ದೊಡ್ಡ ಅಡ್ಡಿಯಾಗಿರುವುದು-ಉಪವಾಸ, ವನವಾಸಮಾಡಲು, ಮನೆಗೆಹೋಗು ಎಂದಾಕ್ಷಣ ಬಾಯಿ ಮುಚ್ಚಿಕೊಂಡು ಮನೆಗೆ ಹೋಗಲು, ನಿರಾಕರಿಸುವ, ಬೆಲೆ ಏರಿಸಿ ಲಾಭವನ್ನು ಒಂದು ಕಡೆ ಗಳಿಸುತ್ತಾ ಮತ್ತೊಂದು ಕಡೆ ಕಡಿಮೆ ಪಗಾರದಲ್ಲಿ ಹೆಚ್ಚು ಶ್ರಮ ದುಡಿಸಬೇಕೆನ್ನುವ ಬಂಡವಾಳಶಾಹಿಯ ಕುತಂತ್ರಕ್ಕೆ, ಮಲೆತು ಸಡ್ಡು ಹೊಡೆದು ಎದುರು ನಿಂತು ತನ್ನ ಶ್ರಮವನ್ನು, ಶ್ರಮದ ಸೌಲಭ್ಯವನ್ನು, ಜೀವನದ, ಕೆಲಸದ ಹಕ್ಕನ್ನು ರಕ್ಷಿಸಿಕೊಳ್ಳಲು ಸಿದ್ಧರಾಗಿರುವ ಕಾರ್ಮಿಕವರ್ಗ, ಕಾರ್ಮಿಕ ಕೇಂದ್ರಗಳಲ್ಲಿ ಸಂಘಟಿತವಾಗಿರುವ ಕಾರ್ಮಿಕ ವರ್ಗ, ಸುಪ್ರೀಂ ಕೋರ್ಟಿನ ತೀರ್ಪು ಮನೆಗೆ ಹೋಗು ಎಂದಾಕ್ಷಣ ಮನೆಗೆ ಹೋಗಬೇಕು ಎನ್ನುವುದನ್ನೊಪ್ಪದೆ ರಾಷ್ಟ್ರಾದ್ಯಂತ ಪ್ರತಿಭಟಿಸಿದ, ಮುಷ್ಕರ ಹೂಡಲು ಸನ್ನದ್ಧವಾಗಿ ನಿಂತ ನೌಕರವರ್ಗ. ಮೂಡಿ ಬರುತ್ತಿರುವ ಐಕ್ಯತೆಯನ್ನು ಒಡೆಯುವುದೊಂದೇ ದಾರಿ. ಅದಕ್ಕೇ ಈ ಕುಟಿಲ ನೀತಿ.

ನೀರಾವರಿಯ ಲಾಭ

ಅದೇ ರೀತಿಯಲ್ಲಿಯೇ ಖುಷ್ಕಿ (ಒಣ ಬೇಸಾಯ) ಪ್ರದೇಶದ ರೈತರ ಬಗ್ಗೆ ಅಪಾರ ಕರುಣೆಯ ಸುರಿ ಮಳೆಯನ್ನು ಸುರಿಸುತ್ತಾ, ಅವರ ಬವಣೆಗೆಲ್ಲಾ ನೀರಾವರಿ ರೈತರೇ ಕಾರಣ, "ನಾವು ನೀರಾವರಿಗಾಗಿ ಅಪಾರ ಬಂಡವಾಳ ಹೂಡಿರುತ್ತೇವೆ. ನೀರಾವರಿ ಈ ಉದ್ದೇಶಕ್ಕಾಗಿ ಖರ್ಚು ಮಾಡಿದ ಬಹುಪಾಲು ಹಣ ಖುಷ್ಕಿ ಭೂಮಿ ರೈತರಿಂದ ಬಂದಿರುತ್ತದೆ. ಆದ್ದರಿಂದ ಈ ನೀರಾವರಿ ಸೌಕರ್ಯದ ಅಭಿವೃದ್ಧಿಗಾಗಿ ತಮ್ಮ ಕಾಣಿಕೆ ನೀಡಬೇಕು ಆದ್ದರಿಂದ ನೀರು ದರದ ಮೇಲೆ ಉಪಕರವನ್ನು ಸಕಾಲದಲ್ಲಿ ವಿಧಿಸಲು ಯೋಚಿಸಿದ್ದೇವೆ" ಎಂದಿದ್ದಾರೆ. ಆದರೆ ಹತ್ತಿ, ಸಣಬು ಮೊದಲಾದ ಕೈಗಾರಿಕಾ ಕಚ್ಚಾ ವಸ್ತುಗಳನ್ನು ಅಗ್ಗದ ಬೆಲೆಯಲ್ಲಿ ಕೊಂಡು, ಆಹಾರ ವಸ್ತುಗಳ ಬೆಲೆಯನ್ನು ಅತಿ ಕಡಿಮೆಯಾಗುವಂತೆ ನೋಡಿಕೊಂಡ, ಹಳ್ಳಿಗಳ ಭೂಮಾಲೀಕರು ಕೊಬ್ಬಿ ಬೆಳೆಯುವಂತೆ, ಇನ್ನುಳಿದವರೆಲ್ಲಾ ಹರಾಜಾಗಿ ಇವರಿಗೆ ಭೂಮಿ ಮಾರಿ, ಇವರ ಅಡಿಯಾಳಾಗಿರುವಂತೆ ನೋಡಿಕೊಂಡವರು ಯಾರು ? ಈ ನೀರಾವರಿಯ ಅಭಿವೃದ್ಧಿಯ ಲವಲೇಶವನ್ನಾದರೂ ನೀರಾವರಿ ರೈತರಿಗೆ ಸಿಗದಂತೆ ಮಾಡಿ ಅವರ ಶ್ರಮದ ಫಲವಾದ ಅಮೃತವನ್ನುಂಡ ಬಂಡವಾಳಗಾರರು, ಅದರಲ್ಲಿಯೂ ಏಕಸ್ವಾಮ್ಯ ಬಂಡವಾಳಗಾರರೇ ಅಲ್ಲವೇ ? 38 ವರ್ಷ ಅವರಿಗೆ ಲಾಭಹೊಡೆಯಲು ಬಿಟ್ಟು ಈಗ ಸಂಘಟನೆಗೊಂಡು ಪ್ರತಿಭಟನೆಗೆ ಕೈ ಹಾಕಿರುವ ನೀರಾವರಿ ರೈತರ ಮೇಲೆ ಖುಷ್ಕಿಯ ರೈತರನ್ನು ಎತ್ತಿಕಟ್ಟುವ ಈ ವಾದ ಎಲ್ಲಿಯದು ?

ಈ ವಾದ ಎಲ್ಲಿಯದು ?

ರಾಜೀವ ಗಾಂಧಿಯವರ ಜನವಿರೋಧಿ ಆರ್ಥಿಕ ನೀತಿಯ ಚುಕ್ಕಾಣಿ ಹಿಡಿದಿರುವ ವಿಶ್ವಬ್ಯಾಂಕ್, ಪಾಶ್ಚಿಮಾತ್ಯ ಬಹುರಾಷ್ಟ್ರೀಯಗಳ, ಹಾಗೂ ಅವರಲ್ಲಿ ತರಬೇತಿ ಪಡೆದ ಭಾರತೀಯ ಅರ್ಥಶಾಸ್ತ್ರಜ್ಞರ ನೀತಿಯ ವಿರುದ್ಧ ಕೋಟ್ಯಾಂತರ ಭಾರತೀಯ ಜನತೆಯ, ಸಂಘಟಿತ ಅಸಂಘಟಿತ ಕಾರ್ಮಿಕರ, ಖುಷ್ಕಿ, ನೀರಾವರಿ ರೈತರ, ಕೃಷಿ ಕಾರ್ಮಿಕರ ಪರವಾದ ಪರ್ಯಾಯ ಆರ್ಥಿಕ ನೀತಿಯನ್ನು ಮುಖಾಮುಖಿಯಾಗಿ ನಿಲ್ಲಿಸುವ ಬದಲು, ಹೆಗ್ಗಡೆಯವರು ಹೂಡಿರುವ ವಾದ ಯಾವುದು ?

ವಿಶ್ವಬ್ಯಾಂಕ್‌ನಿಂದ ಆಮದಾದ ಭಾರತದ ಗುತ್ತೇದಾರಿ ಬಂಡವಾಳಶಾಹಿಯ ಗುಲಾಮರಾದ ಅರ್ಥಶಾಸ್ತ್ರಜ್ಞರ ಮತ್ತೊಂದುವಾದ ಇದು. ಹೆಗ್ಗಡೆಯವರ ಥಿಂಕ್‌ಟ್ಯಾಂಕ್ ಅನ್ನು ಆವರಿಸಿಕೊಂಡಿರುವ ಬಾಂಬೆ ಅರ್ಥಶಾಸ್ತ್ರಜ್ಞರು ಹೇಳಿಕೊಟ್ಟ ಈ ವಾದ "ಲೋಹಿಯಾ ಸಮಾಜವಾದ" ವೆಂಬ ಮತ್ತೊಂದು ರೂಪದಲ್ಲಿ ಹರಡುವ ಈ ವಾದವೂ ಅಮೇರಿಕಾದಿಂದಲೇ, ಪಾಶ್ಚಾತ್ಯ ಬಹುರಾಷ್ಟ್ರೀಯ ಕಂಪನಿಗಳಿಂದಲೇ ಆಮದಾದದ್ದು. ಆದುದರಿಂದ ರಾಜೀವಗಾಂಧಿಯವರ ಜನ ವಿರೋಧಿ ನೀತಿಗೆ, ಕೇಂದ್ರ ಕಾಂಗ್ರೆಸ್ ಸರ್ಕಾರ ಅನುಸರಿಸುತ್ತಾ ಬಂದಿರುವ ಜನ ವಿರೋಧಿ ನೀತಿಗೆ ಪರ್ಯಾಯವಲ್ಲ, ಪೂರಕವಾದ ನೀತಿ ಇದು. ನಗರ ಪ್ರದೇಶದಲ್ಲಿ ಅಸಂಖ್ಯಾತರಾಗಿರುವ ಬಡವರನ್ನು ಗುಡಿಸಲುಗಳಲ್ಲಿ, ಬೀದಿಗಳಲ್ಲಿ ವಾಸ ಮಾಡುತ್ತಾ ಬಂದಿರುವ ದೀನರನ್ನು ಕಡೆಗಣಿಸಿ ಬಗ್ಗೆ ಸರ್ಕಾರದ ಜವಾಬುದಾರಿಯಿಂದ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ನೀತಿ ಇದು ಅದೇ ಕಾಲದಲ್ಲಿ ಗ್ರಾಮೀಣ ಪ್ರದೇಶದ ರಾಜಕಾರಣದ ಚುಕ್ಕಾಣಿ ಹಿಡಿದಿರುವ, ಜನತಾ ಬೆಂಬಲಿಗರಾದ, ಗ್ರಾಮೀಣ ಬಡಜನರ ಜೀವನವನ್ನು ತಮ್ಮ ಮುಷ್ಟಿಯಲ್ಲಿ ಹಿಡಿದಿರುವ ಭೂಸ್ವಾಮಿಗಳ, ಧಾಳಿದಬ್ಬಾಳಿಕೆಯನ್ನು ಕಡೆಗಣಿಸಿ ಗ್ರಾಮೀಣ ಪ್ರದೇಶಕ್ಕಾಗಿ ಎಂಬ ಹೆಸರಿನಲ್ಲಿ ಇವರಿಗೇ ತಮ್ಮ ಯೋಜನೆ ಕೆನೆಯನ್ನು ಉಣಬಡಿಸುವ, ಕೃಷಿ ಕಾರ್ಮಿಕರನ್ನು, ಸಣ್ಣ ರೈತರನ್ನು ಮರೆಯುವ ನೀತಿ ಇದು ವರ್ಗಸಂಘರ್ಷವನ್ನು ತಪ್ಪಿಸಲು ಜನತೆಯಲ್ಲೇ ಸಂಘರ್ಷವನ್ನು ಹುಟ್ಟಿಸುವ ನೀತಿ ಇದು

ಭೂಮಿ, ಕೂಲಿ, ಬೆಲೆ –ಕೀಲಿಕೈಗಳು

ಅಂಸಘಟಿತ ಕಾರ್ಮಿಕರ ಬಗ್ಗೆ ಅಪಾರ ಮೊಸಳೆ ಕಣ್ಣೀರು ಸುರಿಸಿರುವ ರಾಮಕೃಷ್ಣ ಹೆಗ್ಗಡೆಯವರು, ಗ್ರಾಮೀಣ ಪ್ರದೇಶದ ಬಗ್ಗೆ ಅಪಾರ ಅನುಕಂಪ ತೋರಿಸುವ ರಾಮಕೃಷ್ಣ ಹೆಗ್ಗಡೆಯವರು ಈ ಬಜೆಟ್‌ನಲ್ಲಿ ಅವರಿಗಾಗಿ ನೀಡಿರುವ ಕಾಣಿಕೆ ಏನು ?5-6 ವರ್ಷಗಳಿಂದಲೂ ನೆನೆಗುದಿಗೆ ಬಿದ್ದಿರುವ, ಸರ್ಕಾರದ ವಿಳಂಬ ನೀತಿಯಿಂದ 27 ಕೈಗಾರಿಕೆಗಳ ಬಂಡವಾಳಗಾರರಿಗೆ ಕೋಟ್ಯಾಂತರ ರೂ ಲಾಭ ಹೊಡೆಯಲು ಅವಕಾಶನೀಡಿರುವ ಅಸಂಘಟಿತ ಕಾರ್ಮಿಕರ ಕನಿಷ್ಟಕೂಲಿಯ ಬಗ್ಗೆ ಒಂದೇ ಒಂದು ಮಾತಾದರೂ ಇದೆಯೆ? ಖಂಡಿತ ಇಲ್ಲ

ಗ್ರಾಮಾಂತರ ಬಡವರ ಬದುಕನ್ನು ಉನ್ನತ ಮಟ್ಟಕ್ಕೇರಿಸಲು, ಅಷ್ಟೇಕೆ ಇಡೀ ರಾಷ್ಟ್ರದ ಆರ್ಥಿಕ ಸ್ವರೂಪವನ್ನು ಬದಲಾಯಿಸುವ ಕೀಲಿಕೈಯಾದ ಭೂಧಾರಣೆಯ ಬಗ್ಗೆ, ಭೂಮಿಯ ಕೇಂದ್ರೀಕರಣವನ್ನು ತಪ್ಪಿಸಿ ಭೂಹೀನಹೀನರಿಗೆ ಒದಗಿಸುವ, ಹೋಗಲಿ ಸರಕಾರಿ ಭೂಮಿಯನ್ನು ಹತ್ತಾರು ವರ್ಷಗಳಿಂದ ಬೆವರು ಸುರಿಸಿ ಅಬಾದು ಮಾಡಿರುವ ಭೂಹೀನರಿಗಾದರೂ ಅವರೇಘೋಷಿಸಿದಂತೆ, ಆ ಭೂಮಿಯನ್ನು ನೀಡುವ ಕನಿಷ್ಟ ಭರವಸೆಯಾದರೂ ಇದೆಯೇ ? ಇಲ್ಲ ಖಂಡಿತ ಇಲ್ಲ.

ರೈತರ ಫಸಲಿಗೆ ಲಾಭದಾಯಕವಾದ ಬೆಲೆಯನ್ನು ಒದಗಿಸುವ ಯಾವುದೇ ಪ್ರಯತ್ನವಾದರೂ ಕಾಣಿಸುತ್ತದೆಯೇ? ಇಲ್ಲ. ಅವರು ತಮ್ಮ ಓಟುದಾರರಾದ ಈ ರೈತರ ಪರವಾಗಿ ಕೇಳುವುದಿಷ್ಟೇ ಒಂದು ನಿರ್ದಿಷ್ಟ ಕಾಲದವರೆಗೆ ಕೃಷಿ ಕ್ಷೇತ್ರದಲ್ಲಿ ಸ್ಥಿರ ಬೆಲೆಯನ್ನು ನೀಡುವಂಥ ಒಂದು ನೀತಿ. (ಒತ್ತುನನ್ನದು ಈ ಒತ್ತುಗಳನ್ನು ಗಮನಿಸಿ, ರೈತರಿಗೆ ಎಲ್ಲಾಕಾಲಕ್ಕೂ ಲಾಭದಾಯಕವಾದ ಬೆಲೆಯನ್ನು ಇವರು ಬಯಸುವುದಿಲ್ಲ, ಒಂದು ನಿರ್ದಿಷ್ಟ ಕಾಲದವರೆಗೆ ಸ್ಥಿರ ಬೆಲೆಯನ್ನು ಮಾತ್ರ)

ಭೂಮಿ, ಕೂಲಿ, ಬೆಲೆಯನ್ನು ನೀಡುವ ಯಾವುದೇ ಪ್ರಯತ್ನವಿಲ್ಲದೆ ಗ್ರಾಮೀಣ ಬಡವರ ಯಾವುದೇ ಸಂಕಷ್ಟ ಕೇವಲ ವಾಗ್ಜಾಲದಿಂದಭ್ರಮೆಗಳ ಸೃಷ್ಟಿಯಿಂದ ಪರಿಹಾರವಾಗುವುದುಂಟೇ ?.

ಗ್ರಾಮಾಭಿವೃದ್ಧಿಯ ವೆಚ್ಚದಲ್ಲಿ ಕಡಿತ

ವಿಚಿತ್ರವೆಂದರೆ ಗ್ರಾಮೀಣ ಜನರಿಗೆ ಏನಾದರೂ ಸ್ವಲ್ಪ ಯೋಜನೆಗಳು ಇದರಲ್ಲಿರಬಹುದೇನೋ ಎಂದು ಹುಡುಕಿದವರಿಗೆ ತೀವ್ರ ನಿರಾಶೆಯಾಗುವುದು ಖಚಿತ ಗ್ರಾಮಾಭಿವೃದ್ಧಿಯ ಯೋಜನೆಯ ವೆಚ್ಚದಲ್ಲಿ ಏರಿಕೆಯ ತೀವ್ರ ಇಳಿತವೇ ಈಬಜೆಟ್‌ನಲ್ಲಿ ಕಾಣುವುದು. ಸುಮಾರು ನೂರು ಕೋಟಿ ರೂ ಇಳಿತ. ಸಮುದಾಯ ಅಭಿವೃದ್ಧಿ ಯೋಜನೆಗಳಲ್ಲಿ ಒಂದೇ ಬಾರಿಗೆ 78 ಕೋಟಿರೂ ಸಹಕಾರದಲ್ಲಿ 25 ಕೋಟಿರೂ ಕೃಷಿಯಲ್ಲಿ, ಗ್ರಾಮಕೈಗಾರಿಕೆಯಲ್ಲಿ ತಲಾ ಎರಡು ಕೋಟಿ ಬರಪರಿಹಾರದಂತದರಲ್ಲಿ ಕೂಡ ಏರಿಕೆಯ 75 ಲಕ್ಷ ಇಳಿಕ. ಇದು ಇವರ ಗ್ರಾಮಾಭಿವೃದ್ಧಿಯ ಯೋಜನೆ (ಪಟ್ಟಿನೋಡಿ)

ಹಾಗೆಯೇ ಹಿಂದಿನ ವರ್ಷದಲ್ಲಿ (85-86ರಲ್ಲಿ) ಬಜೆಟ್‌ನಲ್ಲಿ ಮೀಸಲಿರಿಸಿದ ಹಣದಲ್ಲಿಯೂ ವರ್ಷದ ಮಧ್ಯದಲ್ಲಿಯೇ ಕಡಿತ (ಪಟ್ಟಿನೋಡಿ) ಹಿಂದಿನ ವರ್ಷದಲ್ಲಿಯೇ ಆಗ ಬೇಕಾಗಿದ್ದುದರಲ್ಲಿ ಕೆಲವನ್ನು ಈ ವರ್ಷ ಸಾಧಿಸುತ್ತೇವೆಂದು ಹೇಳಿರುವುದು, ಈ ಬಜೆಟ್‌ನಲ್ಲಿ ಅವುಗಳಿಗೆ ಹಣ ನೀಡಿರುವುದೇ ಹೆಚ್ಚಿನ ಮಾತು.

ಸಾಗತಾರ್ಹ ಅಂಶಗಳು

ಇಷ್ಟಾದರೂ "ಐಕ್ಯರಂಗ"ದ ಹಿಂದಿನ ಸಂಚಿಕೆಯಲ್ಲಿಯೇ ಹೇಳಿದಂತೆ ಕೇಂದ್ರ ಸರಕಾರದ ನೀತಿಯನ್ನು ಒಮ್ಮೆ ಟೀಕಿಸುವ, ಅದೇ ಟೀಕೆಗೆ ಕಾರಣವಾದ ಮೂಲಭೂತ ನೀತಿಯನ್ನೇ ಮತ್ತೊ

(7ನೇ ಪುಟ ನೋಡಿ)

ಬಜೆಟ್‌ನ ಆದಾಯ ಮೂಲಗಳು

	85-86	86-87
	ಕೋಟಿ ರೂಗಳಲ್ಲಿ	
ರಾಜ್ಯ ತೆರಿಗೆ	1101.22	1265 67
ತೆರಿಗೇತರ ಆದಾಯ	376 51	426.52
ಕೇಂದ್ರ ತೆರಿಗೆಗಳ ಪಾಲು	356.00	390 82
ಕೇಂದ್ರದ ಅನುದಾನ	230.95	227.44
ಒಟ್ಟು	2064.68	2310.45
ಕೇಂದ್ರದಿಂದ, ಸಾರ್ವಜನಿಕರಿಂದ ಸಾಲ ಇತ್ಯಾದಿ	1093.34	799.65
ಒಟ್ಟು ಹಣ ಸಂಗ್ರಹ	3158 02	3110.10

86-87 ಹಣ ನೀಡಿಕೆಯಲ್ಲಿ ಇಳಿತ

	85-86	86-87	ಇಳಿತ
	ಕೋಟಿ ರೂಗಳಲ್ಲಿ		
ಗೃಹ ನಿರ್ಮಾಣ	8 06	6 5	-1.5
ಪ್ರಕೃತಿ ವಿಕೋಪ	7 45	6.70	-0.75
ಕೃಷಿ	84.65	82.36	-2.3
ಸಮುದಾಯಅಭಿವೃದ್ಧಿ	169 03	92.11	-77.8
ಗ್ರಾಮ ಕೈಗಾರಿಕೆಗಳು	4[illegible] 06	44.08	-2 0
ವೈದ್ಯಕೀಯ ಕಟ್ಟಡಗಳು	4 42	2.31	-2.11

ಕೇಂದ್ರ ಸರಕಾರದ ಬೆಲೆ ಏರಿಕೆ ನೀತಿಗಳಿಗೆ ಪ್ರತಿಭಟನೆ

ಕೇಂದ್ರ ಸರ್ಕಾರವು ಇತ್ತೀಚೆಗೆ ಗೋಧಿ, ರಸಗೊಬ್ಬರ, ಕಲ್ಲಿದ್ದಲು, ಪೆಟ್ರೋಲಿಯಂ ವಸ್ತುಗಳು ಹಾಗೂ ಇತರ ಜೀವನಾವಶ್ಯಕ ಸಾಮಗ್ರಿಗಳ ಬೆಲೆಗಳನ್ನು ಏರಿಸಿರುವುದರ ವಿರುದ್ಧ ಪ್ರತಿಭಟಿಸಲು ಸಿ.ಪಿ.ಐ (ಎಂ) ನ ಕರ್ನಾಟಕ ರಾಜ್ಯ ಸಮಿತಿ ಹಾಗೂ ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಳನ ಸಮಿತಿ ನೀಡಿರುವ ಕರೆಗಳಿಗೆ ಓಗೊಟ್ಟು ರಾಜ್ಯಾದ್ಯಂತ ತೀವ್ರ ಮತಪ್ರದರ್ಶನಗಳು, ಮೆರವಣಿಗೆಗಳು, ಸಭೆಗಳು ನಡೆದವು.

ಬೆಂಗಳೂರು: ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ ಕರೆಯ ಮೇರೆಗೆ ದಿನಾಂಕ 19ರಂದು ಪಕ್ಷದ ಕಛೇರಿಯಿಂದ ಹಾಗೂ ಕೃಷ್ಣರಾಜಪುರದಿಂದ ಮೆರವಣಿಗೆಗಳನ್ನು ತೆಗೆದು ಬಹಿರಂಗ ಸಭೆಗಳನ್ನು ನಡೆಸಲಾಯಿತು. ಪಕ್ಷದ ಕಛೇರಿಯಿಂದ ಹೊರಟ ಮೆರವಣಿಗೆ ಮಳೆಮಲ್ಲೇಶ್ವರ ಕೆಂಪೇಗೌಡ ವೃತ್ತ, ಬಸ್‌ನಿಲ್ದಾಣಗಳನ್ನು, ಬಳಸಿಬಂದಿತು. ಕೃಷ್ಣರಾಜಪುರದಲ್ಲಿ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ. ರಾಮಚಂದ್ರರಾವ್‌ರವರೂ, ಪಕ್ಷದ ಕಛೇರಿಯ [illegible] ಕಾಂ. ಸೂರ್ಯನಾರಾಯಣರಾವ್‌ರೂ ಸಭೆಯನ್ನುದ್ದೇಶಿಸಿ ಮಾತನಾಡಿದರು. ದಿನಾಂಕ 17ರಂದು ದೊಡ್ಡಬಳ್ಳಾಪುರದಲ್ಲಿ 400 ಮಂದಿ ಪಕ್ಷದ ಹಾಗೂ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರು ರೈಲು ತಡೆದು ಬಂಧನಕ್ಕೊಳಗಾದರು.

ಭಾರತ ಬಂದ್ ಯಶಸ್ವಿಗೊಳಿಸಲು ಬೆಂಗಳೂರು ಜಿಲ್ಲಾ ಸಮಿತಿ ನೀಡಿದ ಕರೆಯಂತೆ ನಗರದ ಅಡುಗೋಡಿ, ಕೆ. ಆರ್. ಪುರ ಪ್ರದೇಶದ ಸಿಂಗಯ್ಯನಪಾಳ್ಯ, ವೈಟ್‌ಫೀಲ್ಡ್ ಮತ್ತು ಕೆ. ಆರ್. ಪುರ, ಯಶವಂತಪುರ, ಕೆಂಪೇಗೌಡ ನಗರ, ಶ್ರೀರಾಮಪುರಗಳಲ್ಲಿ ಬಹಿರಂಗ ಸಭೆಗಳನ್ನು ನಡೆಸಲಾಯಿತು.

ರಾಷ್ಟ್ರೀಯ ಆಂದೋಲನ ಸಮಿತಿಯ ಕರೆಯ ಮೇರೆಗೆ ಇಲ್ಲಿ ಬೇರೆ ಬೇರೆ ಕಾರ್ಮಿಕ ಸಂಘಗಳಿಗೆ ಸೇರಿದ ನೂರಾರು ಕಾರ್ಮಿಕರು ಶಿವಾಜಿನಗರದಿಂದ ಮೆರವಣಿಗೆ ಹೋಗಿ ರಾಜಭವನದ ಎದುರು ಮೂರು ತಾಸು ಪ್ರತಿಭಟನಾ ಪ್ರದರ್ಶನ ನಡೆಸಿದರು. ಇದರಲ್ಲಿ ಸಿ.ಐ.ಟಿ.ಯು ಎ.ಐ.ಟಿ.ಯು.ಸಿ. ಬಿ.ಎಂ.ಎಸ್. ಎಚ್.ಎಂ.ಎಸ್.ಗೆ ಸೇರಿದ ಕಾರ್ಮಿಕರು ಪಾಲ್ಗೊಂಡಿದ್ದರು. ಸಿಐಟಿಯು ಮುಖಂಡರಾದ ಕಾಂ. ಸೂರ್ಯನಾರಾಯಣರಾವ್ ಹಾಗೂ ಕಾಂ. ಎನ್.ಕೆ. ಉಪಾಧ್ಯಾಯರು ಹಾಗೂ ಇತರ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ರಾಜ್ಯಪಾಲರಿಗೆ ಮನವಿ ಅರ್ಪಿಸಿದರು. ಮತಪ್ರದರ್ಶನದಲ್ಲಿ ಹಲವಾರು ಮಹಿಳೆಯರು ಭಾಗವಹಿಸಿದ್ದರು.

ಹಾಸನ: ಸಿ.ಪಿ.ಐ (ಎಂ) ನ ಹಾಸನ ಶಾಖೆಯ ಸದಸ್ಯರು ಹಾಗೂ ಹಿತೈಷಿಗಳು ನಗರದ ಪ್ರಮುಖ ಬೀದಿಗಳಲ್ಲಿ ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಗಳ ವಿರುದ್ಧ ಘೋಷಣೆ ಕೂಗುತ್ತಾ ಕಾಂ. ಕೆ ಟಿ ರಾಘವೇಂದ್ರ, ಕಾಂ. ಸತ್ಯನಾರಾಯಣ ಹಾಗೂ ಕಾಂ. ಕುಮಾರ್ ನೇತೃತ್ವದಲ್ಲಿ ಮೆರವಣಿಗೆ ನಡೆಸಿದರು. ನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಗಳ ವಿರುದ್ಧ ಹೋರಾಟದ ಅವಶ್ಯಕತೆಯ ಬಗ್ಗೆ ವಿವರಿಸಿದರು.

ಶಿವಮೊಗ್ಗ: ಕೇಂದ್ರ ಸರ್ಕಾರದ ಬೆಲೆ ಏರಿಕೆ ನೀತಿಯನ್ನು ಪ್ರತಿಭಟಿಸಲು ಹಾಗೂ ಅದಕ್ಕೆ ಕಾರಣಗಳನ್ನು ವಿವರಿಸಲು ಕಾಂ. ಶಿವಕುಮಾರ್ ನೇತೃತ್ವದಲ್ಲಿ ಸೀಗೆಹಟ್ಟಿ, ಅರಶಿಪುರ, ಲಷ್ಕರ್ ಮೊಹಲ್ಲಾ, ಅಂಗಳಯ್ಯನ ಕೇರಿ ಮುಂತಾದ ಕಡೆ ಬೀದಿ ಸಭೆಗಳನ್ನು ನಡೆಸಲಾಯಿತು. ಫೆಬ್ರವರಿ 19ರಂದು ಪ್ರಧಾನ ಕಚೇರಿಯ ಮುಂದೆ ಸಿ ಪಿ ಐ. (ಎಂ) ಕಾರ್ಯಕರ್ತರು ಪ್ರತಿಭಟನಾ ಮತ ಪ್ರದರ್ಶನ ನಡೆಸಿದರು.

ಕುಂದಾಪುರ: ಫೆಬ್ರವರಿ 20ರಂದು ಸಿ ಪಿ ಐ. (ಎಂ)ನ ಕುಂದಾಪುರ ತಾಲ್ಲೂಕು ಸಮಿತಿಯ ಆಶ್ರಯದಲ್ಲಿ ಪುರ ಸಭಾ ಸದಸ್ಯ ಕಾಂ ನರಸಿಂಹನವರ ಅಧ್ಯಕ್ಷತೆಯಲ್ಲಿ ಪ್ರತಿಭಟನಾ ಸಾರ್ವಜನಿಕ ಸಭೆ ನಡೆಸಲಾಯಿತು. ಸ್ವಾಗತಿಸಿದ ಕಾಂ. ಮಹಾಬಲ ಒಡೇರಹೋಬಳಿ ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಯನ್ನು ಬಲವಾಗಿ ಖಂಡಿಸಿದರೆ, ಸಿಪಿಐ (ಎಂ) ಜಿಲ್ಲಾ ಸಮಿತಿ ಸದಸ್ಯ ಕಾಂ. ಸಿ. ನಾರಾಯಣ ಎಲ್ಲಾ ಅವಶ್ಯಕ ವಸ್ತುಗಳ ಬೆಲೆ ಮತ್ತಷ್ಟು ಏರಲಿದ್ದು ಜನಸಾಮಾನ್ಯರೆಲ್ಲಾ ಪ್ರತಿಭಟನೆಗೆ ಮುಂದಾಗಬೇಕೆಂದು ಕರೆಯಿತ್ತರು. ತಾಲ್ಲೂಕು ಸಮಿತಿ ಕಾರ್ಯದರ್ಶಿ ಕಾಂ. ಅಪ್ಪಣ್ಣ ಹೆಗ್ಡೆಯವರು ಭಾರತ ಸರ್ಕಾರ ಹೇಗೆ ಸಾಮ್ರಾಜ್ಯಶಾಹಿಗಳ ನಿಯಂತ್ರಣದಲ್ಲಿರುವ ವಿಶ್ವಬ್ಯಾಂಕ್ ಹಾಗೂ ಐ ಎಂ ಎಫ್.ನ ಒತ್ತಡಗಳಿಗೆ ಮಣಿದು ಜನಸಾಮಾನ್ಯರ ನಿರ್ದಯ ಶೋಷಣೆ ನಡೆಸುತ್ತಿದೆ ಎಂಬುದನ್ನು ವಿವರಿಸಿದರು. ಫೆ. 26ರ ಸರ್ಕಾರಿ ನೌಕರರ ಮುಷ್ಕರ ಹಾಗೂ "ಭಾರತ ಬಂದ್‌ಗೆ" ಸಾರ್ವಜನಿಕರ ಪೂರ್ಣ ಬೆಂಬಲ ಕೋರಲಾಯಿತು.

ಬಂಟ್ವಾಳ: ಇಲ್ಲಿನ ಸಿ ಪಿ ಐ.(ಎಂ) ತಾಲ್ಲೂಕು ಸಮಿತಿ ಕಾಂ. ಹೂವಯ್ಯನವರ ಅಧ್ಯಕ್ಷತೆಯಲ್ಲಿ ಫೆಬ್ರವರಿ 19 ರಂದು ಪ್ರತಿಭಟನಾ ಸಭೆ ಏರ್ಪಡಿಸಿತು. ಸಭೆಯಲ್ಲಿ ಮಾತನಾಡಿದ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ ಕೆ. ಆರ್ ಶ್ರೀಯಾನ್‌ರವರು ಕೇಂದ್ರದ ಕಾಂಗ್ರೆಸ್ ಸರ್ಕಾರ ಐ ಎಂ ಎಫ್. ಶರತ್ತುಗಳಿಗೆ ತಲೆ ಬಾಗಿ ಜನರ ಮೇಲೆ ಈ ಭಾರ ಹೊರಿಸಿದೆಯೆಂದು ಹೇಳಿ, ಒಂದೆಡೆ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಆಹ್ವಾನ ನೀಡಿ, ಇನ್ನೊಂದೆಡೆ ಕರ್ನಾಟಕದ ಬರಗಾಲವನ್ನು ಕಡೆಗಣಿಸಿರುವ ಸರ್ಕಾರದ ವಿರುದ್ಧ ಜನತೆ ಎಚ್ಚೆತ್ತು ಸಂಘಟಿತರಾಗಿ ಪ್ರತಿಭಟಿಸಬೇಕೆಂದು ಕರೆಯಿತ್ತರು. ಸಭೆಗೆ ಮೊದಲು ಬಿ.ಸಿ. ರೋಡಿನಲ್ಲಿ ಮೆರವಣಿಗೆ ನಡೆಸಲಾಯಿತು.

ರಾಜ್ಯಾದ್ಯಂತ ಬರ ಪರಿಹಾರಕ್ಕಾಗಿ ಒತ್ತಾಯ

ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಸಿ.ಪಿ ಐ [ಎಂ] ರಾಜ್ಯ ಸಮಿತಿಯ ಕರೆಯ ಮೇರೆಗೆ ರಾಜ್ಯದ ಹಲವೆಡೆ ಬರ ಪರಿಹಾರಕ್ಕಾಗಿ ಒತ್ತಾಯಿಸಿ ಧರಣಿ, ಸಭೆ ನಡೆಸಲ್ಪಟ್ಟಿವೆ; ಕುಡಿಯುವ ನೀರು, ರಿಯಾಯಿತಿ ದರದಲ್ಲಿ ಅಥವಾ ಪುಕ್ಕಟೆಯಾಗಿ ಮೇವು, ಆಹಾರಧಾನ್ಯಗಳು, ಅಂಬಲಿ ಹಾಗೂ ಔಷಧಿಗಳ ವಿತರಣೆ, ಗೋಶಾಲೆಗಳ ನಿರ್ಮಾಣ, ಸಾಲ ವಾಪಸಾತಿಯ ಮುಂದೂಡಿಕೆ, ಸರ್ವ ರಾಜಕೀಯ ಪಕ್ಷಗಳ ಉಸ್ತುವಾರಿ ಸಮಿತಿಯ ರಚನೆ ಮುಂತಾದ ಬೇಡಿಕೆಗಳ ಮನವಿಗಳನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಯಿತು. ಕೇಂದ್ರ ಸರಕಾರ 100 ಕೋಟಿ ರೂ. ಒದಗಿಸಬೇಕೆಂದು ಒತ್ತಾಯಿಸಲಾಯಿತು. ಈ ಬಗ್ಗೆ ಇನ್ನಷ್ಟು ವರದಿಗಳು ಇಲ್ಲಿವೆ.

ತುಮಕೂರು : ರೈತ ಸಂಘದ ಜಿಲ್ಲಾ ಸಮಿತಿ ಜನವರಿ 27 ರಿಂದ ಬರಪೀಡಿತ ಗುಬ್ಬಿ ತಾಲೂಕಿನ ತಹಶಿಲ್ದಾರರ ಮೂಲಕ ಮುಖ್ಯಮಂತ್ರಿಗಳಿಗೆ ಎಂಟು ಬೇಡಿಕೆಗಳ ಮನವಿ ಪತ್ರ ಸಲ್ಲಿಸಿತು. ಇತರ ಬೇಡಿಕೆಗಳೊಂದಿಗೆ ಉದ್ದೇಶಿತ ಹೇಮಾವತಿ ನಾಲೆಯಿಂದ ಹೊಸಕೆರೆ, ಚೇಳೂರು, ಹಾಗಲವಾಡಿ ಮುಂತಾದ ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆ ಕಾರ್ಯಗತವಾಗಬೇಕೆಂದು, ಸಣ್ಣ ಪುಟ್ಟ ದುರಸ್ತಿ ಕಾರ್ಯಗಳಲ್ಲಿ ಪ್ರತಿ ಕುಟುಂಬದ ಒಬ್ಬರಿಗಾದರೂ ಉದ್ಯೋಗ ಒದಗಿಸಬೇಕೆಂದು ಒತ್ತಾಯಿಸಲಾಗಿದೆ.

ಜನವರಿ 27 ರಿಂದ ಫೆಬ್ರವರಿ 3 ರವರೆಗೆ ಬರಪೀಡಿತ ತಾಲ್ಲೂಕು ಕೇಂದ್ರಗಳಲ್ಲಿ ಧರಣಿ ಸತ್ಯಾಗ್ರಹ ನಡೆಸಲಾಯಿತು.

ಸಿ ಪಿ ಐ (ಎಂ) ಜಿಲ್ಲಾ ಸಮಿತಿಯ ಆಶ್ರಯದಲ್ಲಿ ವಿವಿಧ ಸಾಮೂಹಿಕ ಸಂಘಟನೆಗಳ ನೇತೃತ್ವದಲ್ಲಿ ಜನವರಿ 28 ರಿಂದ ಬರ ಪರಿಹಾರ ನಿಧಿ ಸಂಗ್ರಹಣೆ ಪ್ರಾರಂಭಿಸಲಾಯಿತು. ಮೊದಲ ದಿನವೇ ಸಾರ್ವಜನಿಕರಿಂದ ರೂ. 2543-00 ಸಂಗ್ರಹಿತವಾಯಿತು.

ಚಿಕ್ಕಮಗಳೂರು : ಜನವರಿ 29 ರಂದು ಸಿ.ಪಿ.ಐ. (ಎಂ) ನ ಚಿಕ್ಕಮಗಳೂರು ಹಾಗೂ ಮೂಡಿಗೆರೆ ಶಾಖೆಗಳು ಸೇರಿ ಬರಗಾಲ ಪರಿಹಾರವನ್ನು ಒತ್ತಾಯಿಸಿ ಚಳುವಳಿ ನಡೆಸಿದವು. ನಾಲ್ಕು ಬೇಡಿಕೆಗಳುಳ್ಳ ಮನವಿ ಪತ್ರವನ್ನು ಚಿಕ್ಕಮಗಳೂರು ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಹಾಗೂ ಕೇಂದ್ರ ಸರಕಾರಗಳಿಗೆ ಸಲ್ಲಿಸಿ ಪರಿಹಾರ ವ್ಯವಸ್ಥೆಯನ್ನು ಸಕಾಲದಲ್ಲಿ ತುರ್ತಾಗಿ ನೀಡಲು ಆದ್ಯ ಗಮನ ನೀಡಬೇಕೆಂದು, ದೇಶದ ಜನಸಂಖ್ಯೆಯಲ್ಲಿ ಬಹುತೇಕರಾದ ಕೃಷಿಕರ ರಕ್ಷಣೆಗಾಗಿ, ದೇಶದ ಹಿತಕ್ಕಾಗಿ ಖಾಯಂ ನೀರಾವರಿ ವ್ಯವಸ್ಥೆ ಮಾಡಬೇಕೆಂದು ಈ ಎರಡು ಶಾಖೆಗಳು ಜಂಟಿಯಾಗಿ ಒತ್ತಾಯಿಸಿವೆ.

ಗುಲಬರ್ಗ : ರೈತ ಸಂಘದ ತಾಲೂಕು ಸಮಿತಿ ಜನವರಿ 24 ರಿಂದ 30 ರವರೆಗೆ ಜಿಲ್ಲಾಧಿಕಾರಿ ಹಾಗೂ ತಹಸೀಲ್ದಾರ್ ಕಚೇರಿಯ ಮುಂದೆ ಧರಣಿ ನಡೆಸಲಾಯಿತು. ಜನವರಿ 30ರಂದು ಗುಲಬಾರ್ಗ ರೈಲ್ವೇ ಸ್ಟೇಷನ್ನಿನಿಂದ ಸುಮಾರು ಒಂದು ಸಾವಿರ ರೈತರ ಬೃಹತ್ ಮೆರವಣಿಗೆಯನ್ನು ಜಿಲ್ಲೆಯ ರೈತ ಮುಖಂಡರುಗಳ ನೇತೃತ್ವದಲ್ಲಿ ಜಿಲ್ಲಾಧಿಕಾರಿಯವರ ಕಚೇರಿಯವರೆಗೆ ನಡೆಸಿ ಅಲ್ಲಿ ಧರಣಿ ನಡೆಸಲಾಯಿತು. ಜಿಲ್ಲಾಧಿಕಾರಿಗಳಿಗೆ ಹನ್ನೆರಡು ಬೇಡಿಕೆಗಳ ಪಟ್ಟಿಯನ್ನು ಸಲ್ಲಿಸಿ ಈ ಬೇಡಿಕೆಗಳ ಬಗ್ಗೆ ಚರ್ಚೆ ನಡೆಸಲಾಯಿತು. ಸರ್ಕಾರಿ ಬಂಜರು ಭೂಮಿಯನ್ನು ಸಾಗುವಳಿ ಮಾಡಿದ ರೈತರಿಗೆ ಪಟ್ಟಾ ಮಾಡಿಕೊಡಬೇಕೆಂಬ ಬೇಡಿಕೆಯೂ ಇದರಲ್ಲಿ ಸೇರಿದೆ. ನಂತರ ನಡೆದ ಸಭೆಯಲ್ಲಿ ಸೂಕ್ತ ಸಮಯದೊಳಗೆ ಬೇಡಿಕೆ ಈಡೇರದಿದ್ದರೆ ಹೋರಾಟವನ್ನು ತೀವ್ರಗೊಳಿಸಲಾಗುವುದೆಂದು ಸರಕಾರಕ್ಕೆ ಎಚ್ಚರಿಕೆ ನೀಡಲಾಯಿತು.

ಜೇವರ್ಗಿ : ಇದೇ ಜಿಲ್ಲೆಯ ಜೇವರ್ಗಿ ಘಟಕ ಕೂಡಾ ಜನವರಿ 31 ರಂದು ನಿರಲಕೂಡ, ಮುತ್ತಕೋಡ, ಹೆಗ್ಗನಾಳ ಹಂಚನಾಳ, ಕಲ್ಲಹಗರಣ ಸೊನ್ನ, ಹರವಾರ, ಇಜೇರಿ ಮುಂತಾದ ಗ್ರಾಮಗಳಿಂದ ಬಂದ500ಕ್ಕೂ ಹೆಚ್ಚು ರೈತರ ಮೆರವಣಿಗೆ, ಧರಣಿ ನಡೆಸಿ ತಹಶಿಲ್ದಾರರಿಗೆ ಬೇಡಿಕೆ ಪತ್ರ ಸಲ್ಲಿಸಿ ಅವನ್ನು ಈಡೇರಿಸಲು ಒತ್ತಾಯಿಸಲಾಯಿತು. ತಾಲ್ಲೂಕಿನ ಎಲ್ಲಾ 9 ಏತ ನೀರಾವರಿಗಳನ್ನು ಪುನರಾರಂಭಿಸುವ ಬೇಡಿಕೆಯು ಇದರಲ್ಲಿ ಸೇರಿದೆ.

ಲಾಡಮುಗಳಿ : ರೈತ ಸಂಘದ ತಾಲೂಕು ಘಟಕ ಜನವರಿ 29 ರಿಂದ ಫೆಬ್ರುವರಿ 6 ರವರೆಗೆ ಪ್ರಚಾರ ಪ್ರಕ್ಷೋಭೆ, ಗೋಡೆಬರಹ, 2000 ಕರ ಪತ್ರಗಳ ಹಂಚಿಕೆ ಹಾಗು ಕೊನೆಯ ದಿನ ಸಭೆಯ ಮೂಲಕ ಬರ ಪರಿಹಾರವನ್ನು ಒತ್ತಾಯಿಸಿ ಪ್ರಚಾರ ನಡೆಸಲಾಯಿತು. ಸುತ್ತಮುತ್ತಲಿನ ಏಳು ಹಳ್ಳಿಗಳಲ್ಲಿ ಕರಪತ್ರ ಹಂಚಲಾಯಿತು. ಈ ಜಾಥಾದಲ್ಲಿ 20 ಜನರು ಭಾಗವಹಿಸಿದ್ದರು. ಫೆಬ್ರುವರಿ 6ರಂದು ಲಾಡಮುಗಳಿಯಲ್ಲಿ ಅರವಿಂದ ನಾಗೂರೆಯವರ ಅಧ್ಯಕ್ಷತೆಯಲ್ಲಿ ನಡೆದ ಮುಕ್ತಾಯ ಸಭೆಯಲ್ಲಿ 200ಕ್ಕೂ ಹೆಚ್ಚು ಜನ ಹಾಜರಿದ್ದರು.

'ಸಮುದಾಯ': ಹಲವು ಹತ್ತು ಜನಪರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕರ್ನಾಟಕದ ಜನತೆಗೆ ಹತ್ತು ವರ್ಷಗಳಿಂದ ನೀಡುತ್ತಾ ಬಂದಿರುವ ಸಮುದಾಯ ತನ್ನ ದಶಮಾನೋತ್ಸವವನ್ನು ಆಡಂಬರದ, ಅದ್ದೂರಿಯ ಉತ್ಸವ, ಸಮಾರಂಭಗಳ ಮೂಲಕ ಆಚರಿಸದೆ ಭೀಕರ ಬರಗಾಲದಿಂದ ಕಷ್ಟ ನಷ್ಟಗಳಿಗೆ ಗುರಿಯಾಗಿರುವ ಜನತೆಗೆ ತನ್ನ ಕೈಲಾದ ನೆರವು ನೀಡಲು, ಜನರ ನೋವಿಗೆ ಮಿಡಿಯುವ ಸರಳ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ನೀಡಿ ಅದರಿಂದ ಸಂಗ್ರಹವಾಗಿರುವ ಹಣವನ್ನು ಬರಪರಿಹಾರ ಕಾರ್ಯಗಳಿಗೆ ವಿನಿಯೋಗಿಸಲು ಮಂಗಳೂರಿನಲ್ಲಿ ಜನವರಿ 25 ಹಾಗು 26 ರಂದು ನಡೆದ ತನ್ನ ಕೇಂದ್ರ ಸಮಿತಿಯ ಸಭೆಯಲ್ಲಿ ತೀರ್ಮಾನಿಸಿದೆ.

ಭೂನ್ಯಾಯ ಮಂಡಲಿಗಳಲ್ಲಿ ಅನ್ಯಾಯ

ಭೂನ್ಯಾಯ ಮಂಡಳಿಗಳಲ್ಲಿ ರೈತರಿಗೆ ಪ್ರತಿಕೂಲ ತೀರ್ಮಾನವಾಗುತ್ತಿರುವುದನ್ನು ಪ್ರತಿಭಟಿಸಲು ತಾ। 12-2-86 ರಂದು ಎಂ. ಎಸ್. ನಾರಾಯಣರವರ ಅಧ್ಯಕ್ಷತೆಯಲ್ಲಿ ಸೇರಿದ ಮಂಗಳೂರು ತಾಲೂಕು ರೈತ ಸಂಘದ ಸಭೆಯಲ್ಲಿ ತೀರ್ಮಾನಿಸಲಾಯಿತು.

ಇದೇ ಮಾರ್ಚ್ ತಿಂಗಳ 9 ರಂದು ಮಂಗಳೂರು ತಾಲೂಕು ಸಮ್ಮೇಳನವನ್ನು ನಡೆಸಲು ನಿರ್ಣಯಿಸಿ ಮಾರ್ಚ್ 30ಮತ್ತು 31ರಂದು ಮಂಗಳೂರಿನಲ್ಲಿ ನಡೆಯಲಿರುವ ಜಿಲ್ಲಾ ರೈತ ಸಮ್ಮೇಳನವನ್ನು ಯಶಸ್ವಿಗೊಳಿಸಲು ತೀರ್ಮಾನಿಸಲಾಯಿತು. ಮಾಜಿ ಗೇಣಿದಾರರಿಗಾಗಿ ಭೂಪರಿಹಾರವನ್ನು ಕಟ್ಟಲು ಭೂ ಅಭಿವೃದ್ಧಿ ಬ್ಯಾಂಕಿನಿಂದ ಕೊಟ್ಟಿರುವ ಸಾಲವನ್ನು ಸರಕಾರವೇ ತುಂಬಿಸಬೇಕೆಂದೂ, ಸರಕಾರೀ ಸ್ಥಳದಲ್ಲಿ ಮನೆ ಕಟ್ಟಿ ವಾಸಿಸುತ್ತಿರುವವರಿಗೆ ಕೂಡಲೇ ಹಕ್ಕು ಪತ್ರವನ್ನು ಕೊಡಬೇಕೆಂದೂ, ಸಾಗುವಳಿದಾರರ ಗದ್ದೆ ಇರುವಲ್ಲಿ ಅದಕ್ಕೆ ತಾಗಿರುವ ಸರಕಾರೀ ಗುಡ್ಡ ಪ್ರದೇಶಗಳನ್ನು ಸಾಗುವಳಿ ಉಪಯೋಗಕ್ಕೂ ಸೊಪ್ಪು ಉಪಯೋಗಕ್ಕೂ ಕಾಯ್ದಿರಿಸಬೇಕೆಂದೂ ಸರಕಾರಕ್ಕೆ ಒತ್ತಾಯಪಡಿಸಲು ಸಭೆ ನಿರ್ಣಯಿಸಿತು.

ಮಾಜಿ ಗೇಣಿದಾರರಿಗೆ ಹಳೇ ಗೇಣಿ ಬಾಕಿ ಹೆಸರಿನಲ್ಲಿ ನೋಟೀಸು ನೀಡುವುದನ್ನು ತಕ್ಷಣ ನಿಲ್ಲಿಸಬೇಕೆಂದೂ ಸಭೆ ಸರಕಾರವನ್ನು ಒತ್ತಾಯಿಸಿತು.

– ಆರ್. ಚಂದ್ರ

ಅರ್ಥಿಕ ಸಮೀಕ್ಷೆ :

ಕೇಂದ್ರ ಬಜೆಟ್ ಬರಲಿರುವಾಗ ದೇಶದ ಆರ್ಥಿಕ ಪರಿಸ್ಥಿತಿ:

ಅಪಮೌಲ್ಯದ ಅಪಾಯದಲ್ಲಿ ರೂಪಾಯಿ

1986-87 ರ ಕೇಂದ್ರ ಮುಂಗಡ ಪತ್ರದ ಪೂರ್ವ ಸಮೀಕ್ಷೆಯಂತೆ, ಸಂಪನ್ಮೂಲ ಸಂಗ್ರಹದ ವಿಧಾನಗಳಾದ ಉಳಿತಾಯ, ತೆರಿಗೆ, ಸಾಲ, ತಮ್ಮ ಸಾಮರ್ಥ್ಯಗಳನ್ನು ಪೂರ್ಣಗೊಳಿಸಿ, ಹೆಚ್ಚಿನ ಸಂಪನ್ಮೂಲಗಳಿಗೆ ಕೊರತೆ ಹಣ ಸೃಷ್ಟಿ ಅಥವಾ ಸಾರ್ವಜನಿಕ ಕ್ಷೇತ್ರದ ಉತ್ಪಾದನೆಗಳ ಹಾಗೂ ಸೇವಾ ಸೌಲಭ್ಯಗಳ ಬೆಲೆ ಹೆಚ್ಚಿಸುವುದಲ್ಲದೇ ಅನ್ಯ ಮಾರ್ಗವೇ ಇಲ್ಲ ಎಂದು ಕೇಂದ್ರ ಅರ್ಥ ಮಂತ್ರಿ ವಿ. ಪಿ. ಸಿಂಘ್ ತಿಳಿಸಿದ್ದಾರೆ. ಅಲ್ಲದೆ, ಅಭಿವೃದ್ಧಿ ಮತ್ತು ಅನಭಿವೃದ್ಧಿ ವೆಚ್ಚದಲ್ಲಿ ಶೇ 5 ರಷ್ಟು ಕಡಿತಗೊಳಿಸುವ ಅನಿವಾರ್ಯತೆಯನ್ನೂ ತಿಳಿಸಿದ್ದಾರೆ. "ಬೆಲೆ ಏರಿಕೆ ಸಹಿಸಿರಿ, ಅಥವಾ ಯೋಜನೆಯಲ್ಲಿ ಕಡಿತ ಎದುರಿಸಿರಿ" ಎಂದು ಸವಾಲ್ ಹಾಕಿದ್ದಾರೆ. ಪ್ರಧಾನಿ ರಾಜೀವ ಗಾಂಧಿಯೂ "ಮುಂದಿನ ದಿನಗಳಲ್ಲಿ ಕೆಲವು ಕಠಿಣ ನಿರ್ಧಾರಗಳನ್ನು ಕೈಗೊಳ್ಳಬೇಕಾಗುವುದು" ಎಂದು ಎಚ್ಚರಿಕೆ ನೀಡಿದ್ದಾರೆ. (ಆಧಾರ : ಹಣಕಾಸು ಮತ್ತು ಯೋಜನಾ ಖಾತೆಗಳ ಸಂಸತ್ ಸದಸ್ಯರ ಸಲಹಾ ಸಮಿತಿಗಳ ಇತ್ತೀಚಿನ ಸಭೆಗಳಲ್ಲಿ ಅರ್ಥ ಮಂತ್ರಿ ಮತ್ತು ಪ್ರಧಾನ ಮಂತ್ರಿಗಳ ಭಾಷಣ, ಇಂಡಿಯನ್ ಎಕ್ಸ್‌ಪ್ರೆಸ್ : 12-2-86)

ಮೇಲಿನ ಸಮೀಕ್ಷೆಯಲ್ಲಿ, 86-87 ರಲ್ಲಿ ಕೇಂದ್ರ ಸರಕಾರದ ಒಟ್ಟು ವೆಚ್ಚ ರೂ 51147 ಕೋಟಿ ಎಂದೂ, ಅದರಲ್ಲಿ ಯೋಜನಾ ವೆಚ್ಚವು ರೂ. 19845 ಕೋಟಿ ಎಂದೂ (1984-85ರ ದರದಲ್ಲಿ ರೂ 8000 ಕೋಟಿ) ಅಂದಾಜು ಮಾಡಲಾಗಿದೆ. ಈ ವೆಚ್ಚಕ್ಕೆ ಸರಿದೂಗುವಂತೆ, ರೂ 37030 ಕೋಟಿ ಹಣ ಉಳಿತಾಯ, ತೆರಿಗೆ, ಸಾಲಗಳ ಮೂಲದಿಂದ ಬರಲಿರುವುದೆಂದೂ, ರೂ 6755 ಕೋಟಿ ಸಾರ್ವಜನಿಕ ಕ್ಷೇತ್ರದಿಂದ ಸಿಗಲಿರುವುದೆಂದೂ, ಬಾಕಿ ಸುಮಾರು ರೂ. 7400 ಕೋಟಿಯಷ್ಟು ಹಣ ಸಂಗ್ರಹದಲ್ಲಿ ಇನ್ನಷ್ಟು ರೂ 4700 ಕೋಟಿ ಸಾರ್ವಜನಿಕ ಕ್ಷೇತ್ರದಿಂದಲೂ ರೂ. 2700 ಕೋಟಿ ಕೃತಕ ಹಣ ಸೃಷ್ಟಿಯಿಂದಲೂ ಒದಗಿಸಬೇಕೆಂದು ಅಂದಾಜು ಮಾಡಲಾಗಿದೆ. ಅಂದರೆ, ಒಟ್ಟು ರೂ 51147 ಕೋಟಿ ವಾರ್ಷಿಕ ವೆಚ್ಚದಲ್ಲಿ, ರೂ 19845 ಕೋಟಿ ಯೋಜನಾ ವೆಚ್ಚದಲ್ಲಿ, ಸಾರ್ವಜನಿಕ ಕ್ಷೇತ್ರದಿಂದ ನಿರೀಕ್ಷಿಸುವ ಸಂಪನ್ಮೂಲ ರೂ 11,455 ಕೋಟಿಯಷ್ಟು; ಅನುಕ್ರಮವಾಗಿ ಶೇ 22.4 ಮತ್ತು ಶೇ 57.7 ರಷ್ಟು ! ಸಾರ್ವಜನಿಕ ಕ್ಷೇತ್ರದಿಂದ ನಿರೀಕ್ಷಿಸಿದಷ್ಟು ಸಂಪನ್ಮೂಲ ಸಂಗ್ರಹವಾಗದಿದ್ದರೆ, ಇನ್ನಷ್ಟು ಕೃತಕ ಹಣಸೃಷ್ಟಿ ಅಥವಾ ಯೋಜನೆಯಲ್ಲಿ ಕಡಿತ !

ಬೆಲೆ ಏರಿಕೆ

ಏಳನೇ ಯೋಜನೆಯ ಮೊದಲ ವರ್ಷದ (1985 - 86) ಕೊರತೆಯನ್ನು ಕಡಿಮೆ ಮಾಡಲು, ಎರಡನೇ ವರ್ಷಕ್ಕೆ (1986-87) ಸಾಕಷ್ಟು ಸಂಪನ್ಮೂಲ ಪಡೆಯಲು, ಕಳೆದ ಎರಡು ತಿಂಗಳ ಅವಧಿಯಲ್ಲಿ ಕಲ್ಲಿದ್ದಲ ಬೆಲೆ ಶೇ 14.7 ಸಾರ್ವಜನಿಕ ಗೋಧಿ ವಿತರಣೆಯ ಬೆಲೆ ಶೇ 11, ರಸಗೊಬ್ಬರಗಳ ಬೆಲೆ ಶೇ 10 ರಷ್ಟು ಏರಿಸಿದುದೇ ಅಲ್ಲದೆ, ಪೆಟ್ರೋಲ್, ಡಿಸ್ಯಾಲ್, ಸೀಮೆಎಣ್ಣೆ, ಅಡಿಗೆ ಅನಿಲ, ಮುಂತಾದ ದಿನ ಬಳಕೆಯ ಪೆಟ್ರೋಲಿಯಂ ಪದಾರ್ಥಗಳ ಬೆಲೆಗಳನ್ನು ವಿಪರೀತವಾಗಿ ಏರಿಸಲಾಯಿತು. ಇದರಿಂದ, 1985-86 ಕ್ಕೆ ರೂ 300 ಕೋಟಿ ಮತ್ತು 1986-87 ಕ್ಕೆ ರೂ 1700 ಕೋಟಿ ಹೆಚ್ಚಿನ ಸಂಪನ್ಮೂಲ ಪಡೆಯಲು ಉದ್ದೇಶಿಸಲಾಗಿದೆ. ಪೆಟ್ರೋಲಿಯಂ ಪದಾರ್ಥಗಳ ಬೆಲೆ ಏರಿಕೆಯಿಂದಲೇ ಮುಂದಿನ ವರ್ಷದಲ್ಲಿ ರೂ 560 ಕೋಟಿ [ಮೊದಲು ರೂ800 ಕೋಟಿ] ಹೆಚ್ಚು ಹಣ ಸಂಗ್ರಹಿಸುವ ನಿರೀಕ್ಷೆ ಇದೆ. ಇನ್ನೂ 3000 ಕೋಟಿ ಹಣ ಸಾರ್ವಜನಿಕ ರಂಗದಿಂದ ಪಡೆಯಬೇಕಾಗಿದೆ, ರೂ 2700 ಕೋಟಿ ನಿವ್ವಳ ಕೊರತೆಯನ್ನು ನೀಗಿಸಬೇಕಾಗಿದೆ. ಸಂಪನ್ಮೂಲ ಸಂಗ್ರಹದ ಕೊರತೆಯನ್ನು ನೀಗಿಸಲು ಪರಿಹಾರೋಪಾಯಗಳನ್ನು ಸೂಚಿಸುವವರಿಗೆ ಸೂಕ್ತ "ಬಹುಮಾನ" ಕೊಡುವುದಾಗಿ ಅರ್ಥ ಮಂತ್ರಿ ಘೋಷಿಸಿದ್ದಾರೆ ! ಅಂದರೆ, ಅಪ್ರತ್ಯಕ್ಷ ತೆರಿಗೆ ಹೆಚ್ಚಿಸಲು ಹಾಗೂ ಸಾರ್ವಜನಿಕ ಕ್ಷೇತ್ರದ ಉತ್ಪಾದನೆಗಳ ಬೆಲೆ ಏರಿಸಲು ಇನ್ನೇನಾದರೂ ಜೀವನಾವಶ್ಯಕ ವಸ್ತುಗಳು ಉಳಿದಿದ್ದರೆ, ಅವುಗಳ ಪಟ್ಟಿಯನ್ನು ಮಾನ್ಯ ಅರ್ಥ ಮಂತ್ರಿಗೆ ಸೂಚಿಸಿ "ಬಹುಮಾನ" ಪಡೆಯಬಹುದು !

ಹೊಸ ಅರ್ಥಿಕ ನೀತಿ ಮತ್ತು ಹಣಕಾಸು ನೀತಿಯಿಂದ, ಶ್ರೀಮಂತರಿಗೆ ಆಸ್ತಿ, ಲಾಭ, ಆದಾಯಗಳ ಮೇಲಿನ ಪ್ರತ್ಯಕ್ಷ ತೆರಿಗೆಗಳಲ್ಲಿ ಭಾರೀ ರಿಯಾಯಿತಿಗಳನ್ನು ಕೊಡಿಸಿ, ಸರಕಾರದ ಆಡಳಿತ ಮತ್ತು ಅಭಿವೃದ್ಧಿ ವೆಚ್ಚಕ್ಕೆ ಅಪ್ರತ್ಯಕ್ಷ ತೆರಿಗೆ, ಸಾರ್ವಜನಿಕ ಕ್ಷೇತ್ರದ ಉತ್ಪಾದನೆಗಳ ಬೆಲೆ ಏರಿಸುವಿಕೆ, ಕೃತಕ ಹಣ ಸೃಷ್ಟಿ ಮಾಧ್ಯಮಗಳನ್ನು ಅವಲಂಬಿಸುವುದರಿಂದ, ಕಾಂಗ್ರೆಸ್ ಸರಕಾರದ ವರ್ಗ ಗುಣ ಇನ್ನಷ್ಟು ಸ್ಪಷ್ಟವಾಗುತ್ತಿದೆ.

ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯು ಎಷ್ಟು ಅನಗತ್ಯ ಹಾಗೂ ಅಸಮಂಜಸ ಎಂದು ಗಮನಿಸಬೇಕು.

ಸಂಸತ್ತಿನ ಅಪಮಾನ

ಸಂಸತ್ತಿನ ಬಜೆಟ್ ಅಧಿವೇಶನ ಕೆಲವೇ ದಿನಗಳಲ್ಲಿ ನಡೆಯುವುದು ತಿಳಿದಿದ್ದು, ಏಕಪಕ್ಷೀಯವಾಗಿ ಕೇಂದ್ರ ಸರಕಾರ ಆಡಳಿತ ನಿರ್ದೇಶನಗಳ ಮೂಲಕ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಸಿ ಸುಮಾರು ರೂ 2000 ಕೋಟಿಯಷ್ಟು ವಾರ್ಷಿಕ ಅಪ್ರತ್ಯಕ್ಷ ತೆರಿಗೆ ವಿಧಿಸಿದ್ದು ಸಂಸದೀಯ ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದೆ. ಅಪಮಾನ ಮಾಡಿದಂತಾಗಿದೆ. ಈ ಬೆಲೆ ಏರಿಕೆಯಿಂದ ಬರುವ ಹೆಚ್ಚಿನ ಆದಾಯವೆಲ್ಲಾ ಕೇಂದ್ರದ ಪಾಲಾಗುತ್ತದೆ, ಆದರೆ ಈ ಪೆಟ್ರೋಲ್, ಇತ್ಯಾದಿ ಏರಿಕೆಗಳ ಫಲವಾದ ದುಬಾರಿ ವೆಚ್ಚವನ್ನು ರಾಜ್ಯ ಸರ್ಕಾರ ಬರಿಸಬೇಕಾಗುತ್ತದೆ ಈ ದುಬಾರಿ ಹೊರೆಯನ್ನು ಹೊರಿಸುವಾಗ ಸಂವಿಧಾನದಲ್ಲಿ ರಾಜ್ಯಗಳಿಗೆ ಪಾಲು ದಕ್ಕಬೇಕೆಂದು ನಮೂದಿಸಲಾಗಿರುವ ತೆರಿಗೆಗಳನ್ನು ಹೆಚ್ಚಿಸದೆ, ರಾಜ್ಯಗಳ ನ್ಯಾಯಬದ್ಧ ಪಾಲನ್ನು ವಂಚಿಸುವ ಈ ರೀತಿ ಬೆಲೆ ಏರಿಕೆಯಿಂದ ಕೇಂದ್ರ ರಾಜ್ಯಸಂಬಂಧಗಳು ಮತ್ತಷ್ಟು ಹದಗೆಡುತ್ತವೆ.

ಅಪ್ರತ್ಯಕ್ಷ ತೆರಿಗೆ, ಸಾರ್ವಜನಿಕ ಕ್ಷೇತ್ರದ ಉತ್ಪಾದನೆಗಳ ಬೆಲೆ ಏರಿಕೆ ಮತ್ತು ಕೃತಕ ಹಣ ಸೃಷ್ಟಿಯ ಬದಲು, ಶ್ರೀಮಂತ ವರ್ಗದ ಆಸ್ತಿ, ಆದಾಯ, ಲಾಭಗಳಿಕೆಯ ಮೇಲೆ ಹೆಚ್ಚು ಪ್ರತ್ಯಕ್ಷ ತೆರಿಗೆ ಹಾಕಬಹುದಾಗಿತ್ತು. ಭೂಮಾಲಿಕ ಹಾಗೂ ಶ್ರೀಮಂತ ರೈತರ ಕೃಷಿ ಹಿಡುವಳಿ ಅಥವಾ ಉತ್ಪಾದನೆಯ ಆಧಾರದಲ್ಲಿ ಪ್ರತ್ಯಕ್ಷ ತೆರಿಗೆ ಹಾಕಬಹುದಾಗಿತ್ತು. ಶ್ರೀಮಂತ ವರ್ಗದ ದುಂದು ವೆಚ್ಚದ ಮೇಲೆ ಭೋಗ ವಸ್ತುಗಳ ಖರೀದಿಯ ಮೇಲೆ ಪ್ರತ್ಯಕ್ಷಯಾ ಅಪ್ರತ್ಯಕ್ಷ ತೆರಿಗೆ ಹಾಕಬಹುದಾಗಿತ್ತು. ದೇಶದಲ್ಲಿ ಕಪ್ಪು ಹಣ ಕನಿಷ್ಟ ರೂ. 37000 ಕೋಟಿ, ಗರಿಷ್ಟ ರೂ 70000 ಕೋಟಿ ಎಂದು ಅಂದಾಜು ಮಾಡಲಾಗಿದ್ದು' ಆದರ ಸ್ವಲ್ಪಾಂಶವನ್ನಾದರೂ ಸರ್ಕಾರ ತನ್ನ ಬೊಕ್ಕಸಕ್ಕೆ ಸೇರಿಸಿಕೊಳ್ಳಬಹುದಾಗಿತ್ತು.

ಇತ್ತೀಚೆಗೆ ಕೆಲವು ಆಯ್ದ ಕೈಗಾರಿಕಾ ಕುಟುಂಬಗಳ ವ್ಯವಹಾರಗಳ ಮೇಲೆ ತೆರಿಗೆ ಇಲಾಖೆಯವರು ರೈಡ್ ಮಾಡಿದಾಗ ಕೋಟಿಗಟ್ಟಲೆ ರೂಪಾಯಿ ಮೌಲ್ಯದ, ಆಸ್ತಿ, ಆದಾಯ, ಲಾಭ ಅಕ್ರಮವಾಗಿ ಸಂಗ್ರಹಿಸಿರುವುದು ಬೆಳಕಿಗೆ ಬಂದಿದೆ ಅದರೆ ಪ್ರಚಾರಕ್ಕೆ ಮಾಡಿದ ಈ ರೈಡ್‌ಗಳಿಂದ ಸರ್ಕಾರದ ಬೊಕ್ಕಸಕ್ಕೆ ಎಷ್ಟು ತೆರಿಗೆ ಸಂದಾಯವಾಗಿದೆ ಎಂದು ಲೆಕ್ಕ ಸಿಗಲಿಲ್ಲ.

ಸಾಧಾರಣ ದರ್ಜೆಯ ಅಕ್ಕಿಯ ಬೆಲೆಯನ್ನು ಕ್ವಿಂಟಾಲಿಗೆ ರೂ 217 ರಿಂದ ರೂ 231ಕ್ಕೆ ಏರಿಸಿದೆ; ಉತ್ತಮ ದರ್ಜೆಯ ಅಕ್ಕಿಯ ಬೆಲೆಯನ್ನು ರೂ 229ರಿಂದ ರೂ 243ಕ್ಕೆ ಏರಿಸಿದೆ.

ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯಿಂದ, ಜನಸಾಮಾನ್ಯರ ಗ್ರಾಹಕ ಶಕ್ತಿಯು ಕ್ಷಯಿಸುತ್ತಿದ್ದು ಕೃಷಿ – ಕೈಗಾರಿಕೆಗಳಿಗೆ ಆಂತರಿಕ ಮಾರುಕಟ್ಟೆ ಸಂಕುಚಿತವಾಗುವುದು ಪರಿಣಾಮವಾಗಿ, ಆರ್ಥಿಕ ಅಭಿವೃದ್ಧಿಗಾಗಿ ಶ್ರೀಮಂತ ವರ್ಗದ ಸುಖಭೋಗ ವಸ್ತುಗಳ ಆಂತರಿಕ ಮಾರುಕಟ್ಟೆಯನ್ನೂ, ರಫ್ತಿಗಾಗಿ ವಿದೇಶಿ ಮಾರುಕಟ್ಟೆಯನ್ನೂ ಅವಲಂಬಿಸಿ ಸ್ವಾವಲಂಬನೆಯನ್ನು ಕಳೆದುಕೊಳ್ಳಬೇಕಾಗುವುದು.

ರೂಪಾಯ ಅಪಮೌಲ್ಯದ ಅಪಾಯಿ

ರಫ್ತು ಆಧರಿತ ಆರ್ಥಿಕ ಅಭಿವೃದ್ಧಿಯಲ್ಲಿ, ಉದಾರ ಆಮದು ನೀತಿಯನ್ನು ಅನುಸರಿಸುತ್ತಿರುವುದರಿಂದ, ಯೋಜನೆಯ ಮೊದಲ ವರ್ಷದಲ್ಲಿಯೇ ವಿದೇಶಿ ವ್ಯಾಪಾರದಲ್ಲಿ ಭಾರಿ ಪ್ರಮಾಣದಲ್ಲಿಕೊರತೆ ಉಂಟಾಗಿದೆ. 1980-81ರಲ್ಲಿ ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಪಡೆದ ರೂ 5000 ಕೋಟಿ ಸಾಲದ ಮೊದಲ ಕಂತು ಬಡ್ಡಿ ಸಹಿತ 1986-87ರಲ್ಲಿ ಮರು ಪಾವತಿ ಮಾಡಬೇಕಾಗಿದೆ. ಹಳೆಯ ವಿದೇಶಿ ಸಾಲಗಳ ಬಡ್ಡಿ ಸಹಿತ ಮರುಪಾವತಿ ಮಾಡುವ ಭಾರವೂ ಹೆಚ್ಚುತ್ತಿದೆ. ಯೋಜನೆಗೆ ಸಂಪನ್ಮೂಲ ಹಾಗೂ ಹೊಸ ತಂತ್ರಜ್ಞಾನ ಪಡೆಯಲು ಇನ್ನಷ್ಟು ವಿದೇಶಿ ಸಾಲವನ್ನು ವಿಶ್ವ ಬ್ಯಾಂಕ್, ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆ, ಅಂತರ್ರಾಷ್ಟ್ರೀಯ ಬ್ಯಾಂಕುಗಳಿಂದ ನಿರೀಕ್ಷಿಸಲಾಗಿದೆ.

ಈ ಮೂಲಗಳಿಂದ ವಿದೇಶಿ ಸಾಲ ಸಹಾಯಗಳನ್ನು ಪಡೆಯಲು ಪೂರ್ವಶರತ್ತುಗಳನ್ನು ಪಾಲಿಸಲೇಬೇಕಾಗುವುದು. ದೇಶದ ಆರ್ಥಿಕ ವ್ಯವಸ್ಥೆಯನ್ನು ಬಂಡವಾಳ ಜಗತ್ತಿಗೆ ತೆರೆದಿಡುವುದು, ಆಂತರಿಕವಾಗಿ ಸಾರ್ವಜನಿಕ ರಂಗಕ್ಕಿಂತ ಖಾಸಗೀ ರಂಗಕ್ಕೆ ಹೆಚ್ಚಿನ ಆದ್ಯತೆ ನೀಡುವುದು, ಜೀವನಾವಶ್ಯಕ ವಸ್ತುಗಳ ವಿತರಣೆಯ ಬೆಲೆ ಏರಿಸುವುದು, ಸಾರ್ವಜನಿಕ ರಂಗದ ಉತ್ಪಾದನೆಗಳ ಬೆಲೆ ಏರಿಸುವುದು, ಕೃಷಿ ಕೈಗಾರಿಕೆಗಳಿಗೆ ಮತ್ತು ಜನ ಸಾಮಾನ್ಯ ಗ್ರಾಹಕರಿಗೆ ಸಹಾಯಧನ (subsidies) ಕಡಿಮೆಗೊಳಿಸುವುದು, ಅಗತ್ಯವಾದರೆ ರೂಪಾಯಿಯ ಅಂತರ್ರಾಷ್ಟ್ರೀಯ ಬೆಲೆಯನ್ನು ಕಡಿಮೆಮಾಡುವುದು, ಅಪಮೌಲ್ಯಗೊಳಿಸುವುದು (devaluation). ರೂಪಾಯಿ ಅಪಮೌಲ್ಯದ ಅಪಾಯವನ್ನು ಸಿ.ಪಿ.ಐ. (ಎಂ)ಪೊಲಿಟ್‌ಬ್ಯೂರೋ ಸದಸ್ಯ ಕಾ. ಬಿ.ಟಿ. ರಣದಿವೆ, ಲೋಕದಳದ ಪ್ರಧಾನ ಕಾರ್ಯದರ್ಶಿ ಜಾರ್ಜ್ ಫರ್ನಾಂಡೀಸ್, ಪ್ರಸಿದ್ಧ ಅರ್ಥಶಾಸ್ತ್ರಜ್ಞ, ಶ್ರೀಪ್ರಭಾತ್ ಪಟ್ನಾಯಕ್ ತಮ್ಮ ಇತ್ತೀಚಿನ ಹೇಳಿಕೆಗಳಲ್ಲಿ ಸ್ಪಷ್ಟಗೊಳಿಸಿದ್ದಾರೆ, ಜನರನ್ನು ಎಚ್ಚರಿಸಿದ್ದಾರೆ. [ಸಂಡೇ ಅಬ್ಸರ್ವರ್ 7-15.2.86]

ಸಿಐಟಿಯು ರಾಜ್ಯ ಮಂಡಳಿ ಸಭೆಯ ನಿರ್ಣಯಗಳು

ಸಿ. ಐ. ಟಿ. ಯು. ಕರ್ನಾಟಕ ರಾಜ್ಯ ಮಂಡಳಿಯ ಸಭೆ ಕುಂದಾಪುರದಲ್ಲಿ ಫೆಬ್ರವರಿ 9 ಮತ್ತು 10 ರಂದು ರಾಜ್ಯ ಮಂಡಳಿಯ ಅಧ್ಯಕ್ಷರಾದ ಕಾಮ್ರೇಡ್ ಎಸ್. ಸೂರ್ಯನಾರಾಯಣ ರಾವ್ ಅವರ ಅಧ್ಯಕ್ಷತೆಯಲ್ಲಿ ಜರಗಿತು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಕೆಲವು ದಿನಗಳಿಂದ ರಾತ್ರಿ ಹೊತ್ತಿನಲ್ಲಿ ಮನೆ ನುಗ್ಗಿ ಮುಗ್ಧ ಜನ ಸಾಮಾನ್ಯರ ಮೇಲೆ ಪಿಕ್ಕಾಸು, ಹಾರೆ ಇತ್ಯಾದಿಗಳಿಂದ ತಲೆ ಒಡೆದು ಹಾಕುವುದು, ಅವರ ಬಳಿ ಇರುವ ಅಲ್ಪ ಸ್ವಲ್ಪ ಹಣ ಮತ್ತು ಚಿನ್ನಾಭರಣ ಇತ್ಯಾದಿಗಳನ್ನು ದೋಚಿಕೊಂಡು ಹೋಗುವ ಕುರಿತು ಸಭೆಯು ದಿಗ್ಭ್ರಮೆ ವ್ಯಕ್ತಪಡಿಸಿ, ಅಪರಾಧಿಗಳನ್ನು ಪತ್ತೆ ಹಚ್ಚುವುದರಲ್ಲಿ ಪೋಲೀಸು ಖಾತೆಯ ಅಸಡ್ಡೆಯನ್ನು ಖಂಡಿಸಿತು. ಪೋಲೀಸರು ಕೂಡಲೆ ಸೂಕ್ತ ಕ್ರಮ ಕೈಗೊಂಡು ಈ ಅಮಾನುಷ ಕೃತ್ಯಗಳಿಗೆ ಕಾರಣರಾದವರನ್ನು ಪತ್ತೆ ಹಚ್ಚಬೇಕೆಂದೂ ಜನ ಸಾಮಾನ್ಯರಲ್ಲಿರುವ ಭೀತಿಯ ವಾತಾವರಣವನ್ನು ಹೋಗಲಾಡಿಸಬೇಕೆಂದೂ ಸಭೆಯು ಒತ್ತಾಯಿಸಿತು.

ಕನಿಷ್ಟ ಕೂಲಿ ನಿರ್ಧರಿಸಿ ಪ್ರಕಟಿಸುವ ಕುರಿತು ಕರ್ನಾಟಕ ಸರಕಾರದ ವಿಳಂಬ ನೀತಿಯನ್ನು ಸಭೆಯು ಖಂಡಿಸಿ ಈ ಬಗ್ಗೆ ಸರಕಾರದ ಗಮನ

(6 ನೇ ಪುಟ ನೋಡಿ)

ರಾಮ್ ಸ್ವರೂಪ್ ಗೂಢಚರ್ಯೆ ಹಗರಣ

ಅಮೇರಿಕನ್ ಏಜೆಂಟರ ಪಾತ್ರ ಬಟ್ಟಬಯಲು

ಒಂದು ವರ್ಷದ ಹಿಂದೆಯಷ್ಟೆ ಪ್ರಧಾನ ಮಂತ್ರಿ ಮತ್ತು ರಾಷ್ಟ್ರಪತಿಗಳ ಕಚೇರಿಯವರೆಗೂ ಸಾಮ್ರಾಜ್ಯಶಾಹಿ ದೇಶಗಳ ಗೂಢಚಾರ ಸಂಸ್ಥೆಗಳ "ಕಾಣದ ಕೈ" ತಲುಪಿವೆ ಎಂದು ಬಯಲಾಗಿ, ಪ್ರಧಾನಿಯವರ ಮುಖ್ಯ ಕಾರ್ಯದರ್ಶಿಗಳು ರಾಜಿನಾಮೆ ಕೊಡಬೇಕಾಯಿತು. ಇತ್ತೀಚೆಗೆ ಬೆಳಕಿಗೆ ಬಂದಿರುವ ರಾಮ ಸ್ವರೂಪ ಗೂಢಚರ್ಯೆ ಮೊಕದ್ದಮೆಯಿಂದ, ಇಂತಹ ಕಾರ್ಯಾಚರಣೆಗಳು ಅಡೆತಡೆಯಿಲ್ಲದೆ ಮುಂದುವರೆಯುತ್ತಿವೆ ಎಂದು ಸ್ಪಷ್ಟವಾಗಿ ತಿಳಿದುಬರುತ್ತದೆ.

"ಫಾರ್ ಈಸ್ಟರ್ನ್ ಟ್ರೇಡ್ ಸರ್ವಿಸ್" ಎಂಬ ತೈವಾನ್‌ನ ವ್ಯಾಪಾರಿ ಸಂಸ್ಥೆಯ ಹೆಸರಿನಲ್ಲಿ ಗೂಢಚರ್ಯೆ ಕಾರ್ಯಗಳನ್ನು ನಡೆಸುತ್ತಿದ್ದ ರಾಮ್ ಸ್ವರೂಪ್ ಬಹಳದಿನ ಭೂಗತನಾಗಿದ್ದು, ಈಗ ಪೋಲಿಸರ ಕೈಗೆ ಸಿಕ್ಕಿ ಬಿದ್ದಿದ್ದು ನೀಡಿರುವ ಹೇಳಿಕೆ ದೇಶಪ್ರೇಮಿಗಳನ್ನು ದಂಗುಬಡಿಸುವಂತಿವೆ ರಾಮ್‌ಸ್ವರೂಪ್ ಪೋಲಿಸರಿಗೆ ನೀಡಿರುವ ಹೇಳಿಕೆಯಲ್ಲಿ ತಾನು ಸರ್ಕಾರಿ ರಹಸ್ಯಗಳನ್ನು ರಾಜಕಾರಣಿಗಳು, ಪತ್ರಿಕೋದ್ಯೋಗಿಗಳು ನಿವೃತ್ತ ಸೈನಿಕ ಅಧಿಕಾರಿಗಳ ಮೂಲಕ ಪಡೆದು ಅಮೆರಿಕಾ, ಪಶ್ಚಿಮ ಜರ್ಮನಿ, ತೈವಾನ್ ಮತ್ತು ಇಸ್ರೇಲಿ ಏಜಂಟರಿಗೆ ಒಪ್ಪಿಸುತ್ತಿದ್ದುದಾಗಿ ಒಪ್ಪಿಕೊಂಡಿದ್ದಲ್ಲದೆ, ತನ್ನ "ಸಂಪರ್ಕ ವ್ಯಕ್ತಿ"ಗಳನ್ನು ಹೆಸರಿಸಿದ್ದಾರೆ. ಇದರಿಂದಾಗಿ ಇಬ್ಬರು ಕೇಂದ್ರ ಸಚಿವರು ಇಲೆಕ್ಟ್ರಾನಿಕ್ಸ್ ಕಮಿಶನ್‌ನ ಅಧ್ಯಕ್ಷ ರಾಜೀನಾಮೆ ಇತ್ತಿದ್ದಾರೆ.

ಪೋಲೀಸರು ರಾಮ್‌ಸ್ವರೂಪ್ ಮೇಲೆ ಹಾಕಿರುವ ಚಾರ್ಜ್‌ಶೀಟ್ ದೇಶದಲ್ಲಿ ವ್ಯಾಪಕವಾಗಿ ಬುಡಮೇಲು ಕೃತ್ಯಗಳನ್ನು ನಡೆಸುತ್ತಿರುವ ಅಮೇರಿಕನ್ ಸಾಮ್ರಾಜ್ಯ ಶಾಹಿ ಮತ್ತು ನಮ್ಮ ದೇಶದ ರಾಜಕೀಯದ ಉಚ್ಚಸ್ತರಗಳಲ್ಲಿ–ರಾಜಕಾರಣಿಗಳು, ಅಧಿಕಾರಿಗಳು, ಸೈನ್ಯಾಧಿಕಾರಿಗಳು–ಕ್ಯಾನ್ಸರಿನಂತೆ ಹಬ್ಬಿರುವ ಯಾವುದಕ್ಕೂ ಹೇಸದ ಸ್ವಾರ್ಥ ಸಾಧಕತನದ ಮೇಲೆ ಹಾಕಿರುವ ಚಾರ್ಜ್‌ಶೀಟ್ ಸಹ.

ರಾಮ್‌ಸ್ವರೂಪ್‌ನ ಹೇಳಿಕೆಗಳನ್ನು ಆಧರಿಸಿ ಪೋಲೀಸರು ಹಾಕಿರುವ ಚಾರ್ಜ್‌ಶೀಟ್‌ನಲ್ಲಿ ಬಂದಿರುವ ಈ ತೀರ್ಮಾನಗಳು ದಂಗುಬಡಿಸುವಂತಹುದು.

ಅಮೇರಿಕನ್ ಗೂಢಚಾರ ಸಂಸ್ಥೆಯ ಜಾಲ

"ಅಮೇರಿಕನ್ ಗೂಢಚರ್ಯ ಸಂಸ್ಥೆ ಮತ್ತು ಅವರ ಕಾರ್ಯಕರ್ತರು ಭಾರತದ ರಕ್ಷಣೆಗೆ ಸಂಬಂಧಿಸಿದ ರಹಸ್ಯ ಮಾಹಿತಿ/ದಸ್ತಾವೇಜುಗಳನ್ನು ಗುಪ್ತ ಮತ್ತು ಕಾನೂನು-ವಿರೋಧಿ ಕಾರ್ಯಕ್ರಮ ವಿಧಾನಗಳನ್ನು ಬಳಸುವ ಮೂಲಕ ಪಡೆಯುವ ಉದ್ದೇಶದ ಪಿತೂರಿ ಹೂಡಿ ಅದನ್ನು ಕಾರ್ಯಗತಗೊಳಿಸಿದ್ದಾರೆಂದು ಇದರಲ್ಲಿ ಹೊರಬಂದ ಸಂಗತಿಗಳಿಂದ ಸಿದ್ಧವಾಗಿದೆ. ಪ. ಜರ್ಮನಿ ಮತ್ತು ತೈವಾನ್‌ನ ಗೂಢಚಾರ ಸಂಸ್ಥೆಗಳು ಅಮೇರಿಕದ ಗೂಢಚಾರ ಸಂಸ್ಥೆ ಮತ್ತು ಕಾರ್ಯಕರ್ತರ ಜತೆ ಸಕ್ರಿಯವಾಗಿ ಪಾಲುಗೊಂಡಿವೆ ಇವು ದೇಶದ ರಾಜಕೀಯ ವ್ಯವಸ್ಥೆಯನ್ನು ಬುಡಮೇಲು ಮಾಡುವ ಮತ್ತು ವಿದೇಶಿ ಮಿತ್ರ-ರಾಷ್ಟ್ರಗಳ ಜತೆ ಸಂಬಂಧ ಕೆಡಿಸುವ ಉದ್ದೇಶವನ್ನು ಹೊಂದಿದ್ದವು ಅಮೆರಿಕದಲ್ಲಿರುವ ಅಮೆರಿಕನ್ ಗೂಢಚಾರ ಸಂಸ್ಥೆಯ ಅಜ್ಞಾತ ಕಾರ್ಯಕರ್ತರು ಈ ಪಿತೂರಿಯನ್ನು ಹೂಡಿ. ನವದೆಹಲಿಯಲ್ಲಿ ಅಮೆರಿಕನ್ ರಾಯಭಾರ ಕಚೇರಿಯಲ್ಲಿನ ಕೆಲಸಗಳ ನೆವದಲ್ಲಿ ಇಲ್ಲಿಗೆ ಬಂದಿರುವ ಅಮೇರಿಕನ್ ಗೂಢಚಾರ ಸಂಸ್ಥೆಯ ಕಾರ್ಯಕರ್ತರ ಸಹಾಯದಿಂದ ಮತ್ತು ಅವರ ಮೂಲಕ ನವದೆಹಲಿಯಲ್ಲಿ ಕಾರ್ಯಗತಗೊಳಿಸಲಾಗಿದೆ." ಈಗ ಹೊರಬಂದಿರುವ ರಾಮಸ್ವರೂಪ್ ಹಗರಣ ಈ ಪಿತೂರಿಯ ಒಂದು ಸಣ್ಣ ಭಾಗ ಮಾತ್ರ.

ರಾಮಸ್ವರೂಪ್ 1962 ರಷ್ಟು ಹಿಂದಿನಿಂದ ಈ ಕೆಲಸದಲ್ಲಿ ತೊಡಗಿದ್ದು ಅವನನ್ನು ನಿರ್ದೇಶಿಸುತ್ತಿದ್ದ (ಬೇರೆಬೇರೆ ಕಾಲದಲ್ಲಿ) ಅಮೇರಿಕನ್ ಮತ್ತು ಪ. ಜರ್ಮನಿಯ ಅಧಿಕಾರಿಗಳ ಹೆಸರುಗಳನ್ನು ಹೇಳಿದ್ದಾನೆ" ತೊಡಮಾನ್, ಬಾನ್ಸ್ಟರ್, ಶೀಡರ, ಜೇಮ್ಸ್ ಮೂರ್, ಹಂಟರ್, ಮುಂತಾದ ಅಮೆರಿಕನ್ ರಾಯಭಾರ ಕಚೇರಿಯ ಅಧಿಕಾರಿಗಳ ರೂಪದಲ್ಲಿದ್ದ ಗೂಢಚಾರರು ಹ್ಯಾರಿ ಮೆದರ್‌ಬೀ ಮುಂತಾದ ಅಮೆರಿಕನ್ ರಾಯಭಾರಿಗಳು, ಡಾ|| ರೋಲ್ಫ್ ಬಿ ಬ್ರೈಟನ್‌ಸ್ಟೀನ್ ಮುಂತಾದ ಪ. ಜರ್ಮನ್ ರಾಯಭಾರಿಗಳು ರಾಮಸ್ವರೂಪ್ ಜತೆಗೆ ಸಂಪರ್ಕವಿಟ್ಟುಕೊಂಡು, ಅವನ ಕೆಲಸಗಳನ್ನು ನಿರ್ದೇಶಿಸುತ್ತಿದ್ದರು. ಈ ಕೆಲಸಗಳಿಗಾಗಿ ಮತ್ತು ಸಂಭಾವನೆಯಾಗಿ ರಾಮಸ್ವರೂಪ್‌ಗೆ ಹಣ ಕೊಡಲು ಬೇರೆ ಬೇರೆ ವಿಧಾನಗಳನ್ನು, "ಮರೆ"ಗಳನ್ನು ಬಳಸಲಾಗಿತ್ತು. ಮೊದಮೊದಲಿಗೆ ಸಣ್ಣಪುಟ್ಟ ಮಾಹಿತಿ ದಸ್ತಾವೇಜುಗಳನ್ನು ಸಂಗ್ರಹಿಸುತ್ತಾ, ಯಶಸ್ವಿಯಾದ ರಾಮ್‌ಸ್ವರೂಪ್‌ಗೆ ರಾಜಕೀಯ ಕಾರ್ಯಾಚರಣೆಗೆ ಬಡ್ತಿಯಾಯಿತು ಭಾರತದ ರಾಜಕೀಯ ವ್ಯವಸ್ಥೆಯನ್ನು ಒಳಗಿನಿಂದ ಬುಡಮೇಲು ಮಾಡುವ ಹಲವು ಕಾರ್ಯಗಳನ್ನು ರಾಮಸ್ವರೂಪ್ ಮೂಲಕ ಮಾಡಲಾಯಿತು. ಇಂದಿರಾಗಾಂಧಿಯವರ ರಾಜೀವ್ ಗಾಂಧಿಯವರ ಸಂಪುಟದ ಎಲ್ಲಾ ಮಂತ್ರಿಗಳ, ಸಹಾಯಕರ, ಸಲಹಾಕಾರರ ವೈಯುಕ್ತಿಕ ವಿವರಗಳು ಪ್ರಧಾನ ಮಂತ್ರಿಗಳ ಜೊತೆ ಅವರ ಸಂಬಂಧ ಮತ್ತು ನಿಷ್ಠೆಯೊಳಗೊಂಡಂತೆ ವಿಷದವಾದ ವರದಿಗಳು ಕೈ ಬದಲಾಯಿಸಿದವು ಬೇರೆ ಬೇರೆ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಪ್ರಧಾನ ಮಂತ್ರಿಗಳ ಸಂಬಂಧ, ವಿವಿಧ ಭಿನ್ನಮತೀಯರು, ಅವರಿಂದ ಮುಖ್ಯಮಂತ್ರಿಗಳಿಗಿರುವ ಅಪಾಯದ ಬಗೆಗಿನ ವಿವರವಾದ ವರದಿಗಳು ರಾಮಸ್ವರೂಪ್‌ನಿಂದ ವಶಪಡಿಸಿಕೊಂಡ ದಾಖಲೆಗಳಲ್ಲಿ ಸೇರಿವೆ. ಹಲವು ಭಾರಿ ಸಂಪುಟ ಸಭೆಯ ವರದಿ ಸಹ ರಾಮಸ್ವರೂಪ್ ಸಂಪಾದಿಸುತ್ತಿದ್ದ. ಎಂ. ಆರ್. ಮಸಾನಿಯವರ ಸ್ವತಂತ್ರ ಪಕ್ಷ ಪ್ರವರ್ಧಮಾನಕ್ಕೆ ಬರುತ್ತಿದ್ದ 60ರ ದಶಕದಲ್ಲಿ ಈ ಪಕ್ಷದ ಸದಸ್ಯರನ್ನು ಪ್ರಚೋದಿಸಲು ದುಡ್ಡು ಕೊಡಲು ಮತ್ತು ವಿವಿಧ ನೀತಿಗಳ ಬಗ್ಗೆ ತಿಳಿಸಲು ರಾಮಸ್ವರೂಪ್‌ನನ್ನು ಬಳಸಿಕೊಳ್ಳಲಾಯಿತು 1967ರ ಚುನಾವಣೆಗಳ ನಂತರ ಮೊರಾರ್ಜಿ ದೇಸಾಯಿಯವರನ್ನು ಪ್ರಧಾನಿ ಮಾಡಲು ರಾಜಕೀಯ ಪ್ರಚಾರ, ಮುಂದೆ ಮೊರಾರ್ಜಿ ಉಪ ಪ್ರಧಾನಮಂತ್ರಿ ಪದವಿಯಿಂದ ರಾಜೀನಾಮೆ ಕೊಡುವುದನ್ನು ತಡೆಯಲು ಪ್ರಯತ್ನ ಸಹ ಮಾಡಲಾಯಿತು. ರಾಮ್ ಸ್ವರೂಪ್‌ನನ್ನು ನಿರ್ದೇಶಿಸುತ್ತಿದ್ದ ಅಧಿಕಾರಿಗಳ ಕೇಳಿಕೆ ಪ್ರಕಾರ ಇತ್ತೀಚಿನ ಲೋಕಸಭಾ ಚುನಾವಣೆಗಳ ಪರಿಣಾಮದ ಮುನ್ನೋಟ, ಬ್ಲೂಸ್ಟಾರ್ ನಂತರ ಪಂಜಾಬಿನ ಪರಿಸ್ಥಿತಿ, ವಿರೋಧಪಕ್ಷಗಳ ಐಕ್ಯತೆ–ಇವುಗಳ ಬಗ್ಗೆ ವಿವರಗಳನ್ನು ಕೊಡಲಾಯಿತು ಶ್ರೀಮತಿ ಗಾಂಧಿಯವರಹತ್ಯೆ ವಿಚಾರಣೆಗೆ ನೇಮಿಸಿದ ಠಕ್ಕರ್ ಆಯೋಗದ ಬಳಿಯಿರುವ ದಾಖಲೆ ದಸ್ತಾವೇಜುಗಳನ್ನು ಪಡೆಯಲು ಪಿ ಟಿ ಐ ನಲ್ಲಿ ಕೆಲಸ ಮಾಡುತ್ತಿದ್ದ ವರ್ತಕರ್ತ "ಸಂಪರ್ಕ ವ್ಯಕ್ತಿ" ಲಕ್ಷ್ಮಣನ್‌ನ ಮೂಲಕ ಪ್ರಯತ್ನ ನಡೆಯಿತು.

ಎಂಪಿಗಳಿಗೆ ಪ್ರವಾಸ ಭೋಜನಕೂಟಗಳು

ದೇಶದ ರಾಜಕೀಯ ಜೀವನದ ಮೇಲೆ ಪರಿಣಾಮ ಬೀರುವ ಇಂತಹ ಕಾರ್ಯಾಚರಣೆಗಳಿಗೆ ಸ್ವಾಭಾವಿಕವಾಗಿಯೇ, ರಾಜಕಾರಣಿಗಳ ಜತೆ ಸಂಪರ್ಕ ಸಾಧಿಸುವುದು, ಒಳ್ಳೆಯ ಸಂಬಂಧವಿಟ್ಟುಕೊಳ್ಳುವುದು ಅಗತ್ಯವಾಗಿತ್ತು. ಇದಕ್ಕಾಗಿ ರಾಮಸ್ವರೂಪ್ ಹಲವು ವಿಧಾನಗಳನ್ನು ಅನ್ವೇಷಿಸಿದ ನಿಷ್ಣಾತ. ತೈವಾನ್‌ನಲ್ಲಿ ನೆಲೆ ಇದ್ದ "ಕಮ್ಯೂನಿಸ್ಟ್-ವಿರೋಧಿ ಜನತಾ ಲೀಗ್" ಮತ್ತು ಆಮೇಲೆ "ಫಾರ್ ಈಸ್ಟರ್ನ್ ಟ್ರೇಡ್ ಸರ್ವೀಸ್"ನ ಭಾರತದ ಪ್ರತಿನಿಧಿಯಾಗಿ, ಎಂ.ಪಿ.ಗಳನ್ನು ಸಂಪರ್ಕಿಸಲು ಮತ್ತು ಹಣದ ವ್ಯವಸ್ಥೆ ಮಾಡಲು ಸಾಧ್ಯವಾಯಿತು ಬೇರೆ ಬೇರೆ ಹೆಸರಿನಲ್ಲಿ (ವಿಚಾರಗೋಷ್ಠಿಗಳಿಗೆ ಇತ್ಯಾದಿ) ಎಂ.ಪಿ.ಗಳ ಗುಂಪನ್ನು ತೈವಾನ್ ಭೇಟಿಗೆ ಕರೆದುಕೊಂಡು ಹೋಗುವುದು ಒಂದು ಇಂತಹ ವಿಧಾನವಾಗಿತ್ತು. ಇಂಡೋ-ಪ. ಜರ್ಮನಿ ಪಾರ್ಲಿಮೆಂಟರಿ ಗುಂಪು ಎಂಬ ಸಂಸ್ಥೆಯ ಮೂಲಕ ಜರ್ಮನ್ ಅಧಿಕಾರಿಗಳು ಏರ್ಪಡಿಸಿದ ಹಲವುಬಾರಿ ಸೀಮಿತ ಮತ್ತು ಗುಪ್ತ ಭೋಜನಕೂಟದಲ್ಲಿ ಭಾಗವಹಿಸಲು ಆರಿಸಿದ ಎಂ ಪಿ ಗಳನ್ನು ಆಹ್ವಾನಿಸುವ ಮೂಲಕ ಇಬ್ಬರಿಗೂ ಸಂಪರ್ಕ ಏರ್ಪಡಿಸುವುದು, ಪ. ಜರ್ಮನಿಗೆ ಭೇಟಿಗೆ ವ್ಯವಸ್ಥೆಮಾಡುವುದು, ಚುನಾವಣಾ ವೆಚ್ಚ ಭರಿಸುವುದು-ಇವು ಇನ್ನು ಹಲವಾರು ಕ್ರಮಗಳಾಗಿದ್ದವು. ಇಂಡೋ-ಪ.ಜರ್ಮನಿ ಪಾರ್ಲಿಮೆಂಟರಿ ಗುಂಪಿಗೆ ಸುಮಾರು 250 ಎಂ ಪಿ-ಗಳು ಸದಸ್ಯರಾಗಿದ್ದರು. ಇಂತಹ ಹಲವು ಸಭೆ, ಭೋಜನಕೂಟಗಳಲ್ಲಿ ಅಮೆರಿಕನ್ ಅಧಿಕಾರಿಗಳೂ ಹಾಜರಿರುತ್ತಿದ್ದರು. ಈ ಗುಂಪಿನ ಸದಸ್ಯರ, ಭೋಜನಕೂಟಗಳಿಗೆ ಹಾಜರಾದ ಸದಸ್ಯರ ಪಟ್ಟಿ ದೊರೆತಿದೆ.

ರಾಮಸ್ವರೂಪ್ ಪರಿಣಾಮ ಬೀರಲು ಯತ್ನಿಸಿದ ರಾಜಕಾರಣಿಗಳು ಆಳುವ ಪಕ್ಷ ಮತ್ತು ಜನತಾ, ಬಿಜೆಪಿ ಯಂತಹ ವಿರೋಧ ಪಕ್ಷಗಳಿಗೆ ಸೇರಿದ್ದು, ಅವರ ಹೆಸರುಗಳು ಬಹಿರಂಗವಾದಾಗ ವಿವಾದ ಕೈಡೆ ಕೊಟ್ಟಿದೆ, ಅದೂ ವಿರೋಧ ಪಕ್ಷಗಳ ಸದಸ್ಯರ ಸಂಬಂಧದ ಬಗ್ಗೆ. ವೈಯಕ್ತಿಕ ಸದಸ್ಯರ ಬಗ್ಗೆ ರಾಮಸ್ವರೂಪ್ ನೀಡಿದ ಹೇಳಿಕೆಯ ಸತ್ಯಾಸತ್ಯತೆ ಮೊಖದ್ದಮೆ ವಿಚಾರಣೆ ಸಮಯದಲ್ಲಿ ಸಿದ್ಧವಾಗಬೇಕು ಆದರೆ ವಿದೇಶ ಭೇಟಿ ಇತ್ಯಾದಿಗಳ ಮೂಲಕ ಹಲವು ಎಂ ಪಿ ಗಳ ಮೇಲೆ ಪರಿಣಾಮ ಬೀರಲು ಪ್ರಯತ್ನ ನಡೆದಿದ್ದು, ಅದು ಸಾಕಷ್ಟು ಸಫಲವಾಗಿದ್ದಂತೂ ನಿಜ, ಅಲ್ಲದೆ ಆಗಾಗಿನ ಆಳುವ ಪಕ್ಷಗಳ ಆರಿಸಿದ ಕೆಲವು ಸದಸ್ಯರ ಮೇಲೆ ರಾಮಸ್ವರೂಪ್ ಗಮನ ಕೇಂದ್ರೀಕರಿಸಿದ್ದು ಕಂಡುಬರುತ್ತದೆ. ಕಾಂಗ್ರೆಸ್(ಐ)ನ ಎಂ ಎಸ್. ಸಂಜೀವಿರಾವ್ ಚಂದಾರ್‌ಕರ್, ಕೆ.ಪಿ. ಸಿಂಗದೇವ್ ಇತ್ಯಾದಿ ಮತ್ತು ವಿರೋಧ ಪಕ್ಷಗಳ ಅಟಲ ಬಿಹಾರಿ ವಾಜಪೇಯಿ, ಪಿ. ಕೆ. ದೇವ್, ಕಾಂತಿ ದೇಸಾಯಿ, ಮಧೋಕ್ ಇತ್ಯಾದಿ ಸದಸ್ಯರನ್ನು ಈ ಸಂಬಂಧದಲ್ಲಿ ಹೆಸರಿಸಲಾಗಿದೆ.

ರಕ್ಷಣಾ ರಹಸ್ಯ ಬಯಲು

ಇನ್ನೊಂದು ಆತಂಕಕಾರಿ ಸಂಗತಿ ರಕ್ಷಣಾ ರಹಸ್ಯಗಳ ಬಯಲು : ರಾಮಸ್ವರೂಪ್ ರಕ್ಷಣಾ ಪಡೆಗಳಲ್ಲಿರುವ ತನ್ನ ಸಂಪರ್ಕ ವ್ಯಕ್ತಿಗಳ ಮೂಲಕ ಹಲವು ರಕ್ಷಣಾ ರಹಸ್ಯಗಳ ದಾಖಲೆ/ದಸ್ತಾವೇಜುಗಳನ್ನು ಪಡೆದು ಅಮೆರಿಕನ್ ಅಧಿಕಾರಿಗಳಿಗೆ ಒಪ್ಪಿಸುತ್ತಿದ್ದ. ಅವನ ಆಫೀಸ್ ಗೆಸ್ಟ್ ಹೌಸ್‌ನಲ್ಲಿ ವಶಪಡಿಸಿಕೊಂಡ ದಾಖಲೆಗಳಲ್ಲಿ ವಿಮಾನಪಡೆಗೆ ಸಂಬಂಧಪಟ್ಟ ನಾಲ್ಕು ದಸ್ತಾವೇಜುಗಳು ಮತ್ತು ಸೈನ್ಯದ ಗುಪ್ತ ಭೂಪಟ ಸಹ ಸೇರಿದ್ದವು. ಇವು ಶತ್ರು ದೇಶವೊಂದರ ಕೈ ಸೇರಿದರೆ ದೇಶದ ರಕ್ಷಣೆಗೆ ಆತಂಕಕಾರಿ ಸನ್ನಿವೇಶ ಉಂಟುಮಾಡುವ ರೀತಿಯ ದಸ್ತಾವೇಜುಗಳೆಂದು ತಿಳಿದುಬಂದಿದೆ. ಅಣು ತಂತ್ರಜ್ಞಾನದ ಬಗ್ಗೆ ಸಹ ವರದಿಗಳು ಕೈ ಬದಲಾಗಿವೆ ಎಂದು ರಾಮಸ್ವರೂಪ್ ತಿಳಿಸಿದ್ದಾನೆ.

ರಾಮಸ್ವರೂಪ್ ರಕ್ಷಣಾ ಪಡೆಗಳಿಗೆ ಸಂಬಂಧಪಟ್ಟವರ ಜತೆ ಸಂಪರ್ಕ ಸಾಧಿಸಲು, "ನಿವೃತ್ತ ಸೈನಿಕರ ಉದ್ಯೋಗ ಸಹಾಯಕ ಆಯೋಗ" ಎಂಬ ನಿವೃತ್ತ ಸೈನಿಕರ ಸಂಘಟನೆಯನ್ನು ಬಳಸಿಕೊಂಡ. ಈ ಸಂಘಟನೆಗಳ ಮೂಲಕ ಆರಿಸಿದ ಕೆಲವು ಪ್ರಮುಖ ನಿವೃತ್ತ ಅಧಿಕಾರಿಗಳನ್ನು ತೈವಾನ್ ಭೇಟಿಗೆ ಏರ್ಪಾಡು ಮಾಡಿ, ಸಂಪರ್ಕ ಬೆಳೆಸಿಕೊಂಡಿದ್ದ. ವಿಂಗ್ ಕಮಾಂಡರ್ ಎಂ ಕೆ, ಛೋಪ್ರಾ ಕರ್ನಲ್ ಎಂ. ಐ. ಸೂರಿ, ಬ್ರಿಗೇಡಿಯರ್ ಆರ್. ಐ ಎಸ್. ಲೂತ್ರಾ – ಹೆಸರಿಸಲ್ಪಟ್ಟ ಕೆಲವು ಅಧಿಕಾರಿಗಳು.

ಲಕ್ಷಾಧೀಶನಾದ ರಾಮಸ್ವರೂಪ್

ತಿಂಗಳಿಗೆ 150 ರೂ. ಆದಾಯದಿಂದ ಪ್ರಾರಂಭಿಸಿದ ರಾಮಸ್ವರೂಪ್ ಈಗ ಲಕ್ಷಾಧೀಶ. ಒಂದು ಭಾರಿ ಮನೆ, ಮೂರು ಫ್ಲಾಟ್‌ಗಳು 2 ಅಂಬಾಸಡರ್ ಕಾರ್, 1 ಮಾರುತಿ ಕಾರ್ ಹೊಂದಿರುವ ಈತನ ಠಾಕುಠೀಕಿನ ಜೀವನ ಕ್ರಮದ ಹಿಂದಿನ ಗುಟ್ಟು 70ರ ದಶಕದಲ್ಲಿ ದೊಡ್ಡ ಪ್ರಮಾಣದಲ್ಲಿ ಆರಂಭಿಸಿದ ಗೂಢಚಾರ ಕೆಲಸಗಳು ಸಾಮಾನ್ಯ ಬ್ಯಾಂಕುಗಳ ಮೂಲಕ ಈತನಿಗೆ ಬರುತ್ತಿದ್ದ ಹಣದ ಮೂಲ ಸಹ ನಿಗೂಢ.

ವಿದೇಶಿ ನೀತಿಯ ಮೇಲೆ ಪ್ರಭಾವ

ಸಾಮ್ರಾಜ್ಯಶಾಹಿಗೆ ಅನುಕೂಲವಾಗಿಲ್ಲದ ಭಾರತದ ಅಲಿಪ್ತ ನೀತಿಯನ್ನು ಬದಲಾಯಿಸಲು ರಾಜಕೀಯ ಪ್ರಭಾವ ಬೀರಲು ಪ್ರಯತ್ನಿಸುವುದು ಮತ್ತು ಸೋವಿಯತ್ ಒಕ್ಕೂಟದ ಜತೆ ಇರುವ ಸ್ನೇಹ ಕೆಡಿಸುವುದು ಇವು ವಿದೇಶ ನೀತಿಯ ಬಗ್ಗೆ ರಾಮಸ್ವರೂಪ್ ಮೂಲಕ ನಡೆಸಿದ ಕಾರ್ಯಾಚರಣೆಗಳ ಮುಖ್ಯ ಉದ್ದೇಶಗಳಾಗಿ ಮೂಡಿಬರುತ್ತವೆ.

(6ನೇ ಪುಟ ನೋಡಿ)

ಬಂಟ್ವಾಳ ಆಸ್ಪತ್ರೆಗೆ ಸೌಕರ್ಯ ಒದಗಿಸಲು ಮನವಿ

ಮೂರು ಲಕ್ಷ ಜನರಿರುವ ಬಂಟ್ವಾಳ ತಾಲ್ಲೂಕಿನ ಏಕಮಾತ್ರ ಸರಕಾರಿ ಆಸ್ಪತ್ರೆ ಅವಶ್ಯಕ ಸೌಲಭ್ಯಗಳಿಲ್ಲದೆ ಶೋಚನೀಯ ಸ್ಥಿತಿಯಲ್ಲಿರುವ ಬಗ್ಗೆ ಹಾಗೂ ಇದರಿಂದಾಗಿ ತಾಲ್ಲೂಕಿನ ಶೇಕಡಾ 90 ರಷ್ಟು ಬಡಜನಗಳಾದ ಕೂಲಿಗಾರರು, ಬೀಡಿ ಕಾರ್ಮಿಕರು ಹಾಗೂ ಸಣ್ಣ ರೈತರು ವೈದ್ಯಕೀಯ ಚಿಕಿತ್ಸೆಯ ದುಬಾರಿ ಖರ್ಚನ್ನು ಭರಿಸಿಕೊಳ್ಳಲು ಸಾಧ್ಯವಾಗದೆ ಕಷ್ಟದಲ್ಲಿರುವ ಬಗ್ಗೆ ರಾಜ್ಯದ ಆರೋಗ್ಯ ಮಂತ್ರಿಗಳ ಗಮನ ಸೆಳೆಯಲು ಸಿ.ಪಿ.ಐ (ಎಂ) ತಾಲ್ಲೂಕು ಸಮಿತಿ ಹತ್ತು ಬೇಡಿಕೆಗಳ ಒಂದು ಮನವಿ ಪತ್ರವನ್ನು ಸಲ್ಲಿಸಿದೆ. ಆಸ್ಪತ್ರೆಯನ್ನು 20 ಹಾಸಿಗೆಗಳಿಂದ 100 ಹಾಸಿಗೆಗಳಿಗೆ ವಿಸ್ತರಿಸುವುದು, ಶಸ್ತ್ರಚಿಕಿತ್ಸೆ, ಎಕ್ಸ್-ರೇ, ತುರ್ತು ಚಿಕಿತ್ಸಾ ವಾಹನ, ರಕ್ತ ಶೇಖರಣೆ ಮತ್ತು ಪ್ರಯೋಗಾಲಯ ಸೌಲಭ್ಯವನ್ನು ಈ ಆಸ್ಪತ್ರೆಗೆ ಒದಗಿಸುವುದೂ, ಸೂಕ್ತ ಪ್ರಮಾಣದಲ್ಲಿ ಔಷಧಿಗಳ ಪೂರೈಕೆ, ವಿದ್ಯುತ್ ವ್ಯವಸ್ಥೆಯನ್ನು ಸರಿಪಡಿಸುವುದು, ಆಸ್ಪತ್ರೆ ಸಿಬ್ಬಂದಿಗೆ ಸೂಕ್ತ ವಸತಿ ಸೌಲಭ್ಯ ಹಾಗೂ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು ಇವೇ ಮುಂತಾದ ಬೇಡಿಕೆಗಳನ್ನು ಅನಿವಾರ್ಯವಾಗಿ ಕಾರ್ಯಗತಗೊಳಿಸಬೇಕೆಂದು ತಾಲ್ಲೂಕು ಸಮಿತಿ ಕಾರ್ಯದರ್ಶಿ ಕಾ|| ವಾಸುಗಟ್ಟಿ ಆರೋಗ್ಯ ಮಂತ್ರಿಗಳನ್ನು ಈ ಮನವಿ ಮೂಲಕ ಒತ್ತಾಯಿಸಿದ್ದಾರೆ.

ರಾಮ್ ಸ್ವರೂಪ್ ಗೂಢಚರ್ಯೆ ಹಗರಣ

(5ನೇ ಪುಟದಿಂದ)

ಸ್ವತಂತ್ರ ಪಕ್ಷದ ಸದಸ್ಯರ ಮೂಲಕ ಪಾರ್ಲಿಮೆಂಟಿನಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯರ ಲಾಬಿಯ ವಿರುದ್ಧ ಪ್ರಭಾವ ಉಂಟುಮಾಡುವ ಪ್ರಯತ್ನ ಇಂತಹದರಲ್ಲಿ ಒಂದು.

ಕಾಂತಿ ದೇಸಾಯಿಯ ಮೂಲಕ, ಪ್ರಧಾನಿ ಮೊರಾರ್ಜಿದೇಸಾಯಿ ಮತ್ತು ಅಧ್ಯಕ್ಷ ಬ್ರೆಜ್‌ನೇವ್‌ರ ಮಾಸ್ಕೋ ಮಾತುಕತೆಯ ವಿವರಗಳು ಅಮೆರಿಕನ್ ಗೂಢಚಾರ ಅಧಿಕಾರಿಗಳಿಗೆ ತಲುಪಿದ್ದವು. ಭಾರತ-ರಷ್ಯಾ ರೂಪಾಯಿ ವ್ಯಾಪಾರ ಪದ್ಧತಿಯನ್ನು ರದ್ದುಪಡಿಸುವಂತೆ ಮೊರಾರ್ಜಿಯವರ ಮನವೊಲಿಸುವ ಪ್ರಯತ್ನ, ಈ ವಿಷಯವನ್ನು ಸಂಪುಟದ ರಾಜಕೀಯ ವಿಚಾರಗಳ ಸಮಿತಿಯಲ್ಲಿ ಇಡುವವರೆಗೆ ಸಫಲವಾಯಿತು. ಆದರೆ ಹಲವು ಸದಸ್ಯರ ವಿರೋಧದಿಂದ ಇದನ್ನು ಕೈಬಿಡಲಾಯಿತು.

1979 ರಲ್ಲಿ ರಶ್ಯಾದ ವಿರುದ್ಧ ಪ್ರಚಾರ ಕಾರ್ಯಕ್ರಮ ಮತ್ತು ಸರ್ಕಾರದ ವಿದೇಶ ನೀತಿಯ ಮೇಲೆ ಪ್ರಭಾವದ ದೊಡ್ಡ ಯೋಜನೆಯನ್ನು ಅಮೆರಿಕನ್ ಮತ್ತು ಪ. ಜರ್ಮನಿಯ ಗೂಢಚಾರ ಅಧಿಕಾರಿಗಳು ತಯಾರಿಸಿ ರಾಮಸ್ವರೂಪ್ ಮೂಲಕ ಜಾರಿಗೆ ತಂದರು ಇದಕ್ಕಾಗಿ ತಿಂಗಳಿಗೆ ಒಂದು ಲಕ್ಷ ರೂ. (20,000 ರೂ. ಕೇವಲ ಸ್ವಂತ ಖರ್ಚಿಗೆ) ರಾಂಸ್ವರೂಪ್‌ಗೆ ಕೊಡಲಾಯಿತು.

ಪಿ.ಟಿ.ಐ ನಲ್ಲಿ ರಷ್ಯಾದ ಏಜಂಟರು ಇದ್ದಾರೆ ಎಂದು ಆಪಾದಿಸಿ ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾದಲ್ಲಿ ದೂರು ಸಲ್ಲಿಸಿದ. ಇದಕ್ಕೆ ಆಗತಾನೆ ಮಾಸ್ಕೋದಿಂದ ಹಿಂತಿರುಗಿದ ಲಕ್ಷ್ಮಣ್ ಎಂಬ ಪತ್ರಕರ್ತನ ಸಹಾಯ ಪಡೆದ.

ಆಫಘಾನಿಸ್ಥಾನ

ಆಫ್‌ಘಾನಿಸ್ಥಾನದಲ್ಲಿ ರಶ್ಯನ್ "ಮಧ್ಯಪ್ರವೇಶದ" ಕುರಿತು ಮುಂಬಯಿ, ಶ್ರೀನಗರ, ದೆಹಲಿ, ಬೆಂಗಳೂರುಗಳಲ್ಲಿ ವಿಚಾರಗೋಷ್ಠಿಗಳನ್ನು ನಡೆಸಲಾಯಿತು. ಇದರಲ್ಲಿ ಎಂ. ಎಸ್. ಗುರುಪಾದಸ್ವಾಮಿ, ಎಂ. ಎಲ್. ಸೋಂಧಿ, ಮುಂತಾದ ರಾಜಕಾರಣಿಗಳು ಭಾಗವಹಿಸಿದ್ದಲ್ಲದೆ, ಪಿ. ಎಸ್. ಲೇಖಿಯಂತಹ ವಕೀಲರು, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಪ್ರೊಫೆಸರ್ ಜಯಶೇಖರ್‌ರಂತಹ ಶಿಕ್ಷಣವೇತ್ತರರನ್ನು ತೊಡಗಿಸಿದ ಇವರೆಲ್ಲರ ಪ್ರವಾಸ, ತಂಗುವ ವ್ಯವಸ್ಥೆಗೆ, ಮತ್ತು ಉಳಿದ ವೆಚ್ಚಗಳಿಗೆ ಅಮೇರಿಕನ್ ಮೂಲಗಳಿಂದ ಹಣ ಒದಗಿಬಂದಿತ್ತು. ಈ ಎಲ್ಲಾ ವಿಚಾರಗೋಷ್ಠಿಗಳು ರಶ್ಯಾ ವಿರೋಧಿಯಾಗಿದ್ದವು ಎಂದು ಬೇರೆ ಹೇಳಬೇಕಾಗಿಲ್ಲ. ಇದಲ್ಲದೆ ಪ್ರೊಫೆಸರ್ ಜಯಶೇಖರ್‌ನನ್ನು ಅಮೇರಿಕಾದ ವಿಶ್ವವಿದ್ಯಾಲಯಗಳಲ್ಲಿ ಸೋವಿಯೆಟ್ ನೀತಿಯ ಬಗ್ಗೆ ಅಧ್ಯಯನಕ್ಕೆ ಅಮೇರಿಕಾಕ್ಕೆ ಕಳಿಸಿದ್ದಲ್ಲದೆ, ಅಲಿಪ್ತ ದೇಶಗಳ ಸಮಸ್ಯೆ ಬಗ್ಗೆ ಒಂದು ಪತ್ರಿಕೆಗೆ ಧನಸಹಾಯದ ಮೂಲಕ ವಿದೇಶ ನೀತಿಯ ಮೇಲೆ ಪ್ರಭಾವ ಉಂಟುಮಾಡಲು ಪ್ರಯತ್ನಿಸಲಾಯಿತು

ಅಮೇರಿಕನ್ ಅಧಿಕಾರಿಗಳು ರಾಮಸ್ವರೂಪ್ ಮೂಲಕ ಪಿ. ಎಸ್. ಲೇಖಿಗೆ ಆಫ್‌ಘಾನ್ ಕಾನೂನು ಸಮಿತಿಯ ಮೂರು ದಿನಗಳ ಸಭೆಗೆ, 1982 ರಲ್ಲಿ ಇದೇ ಸಂಬಂಧದಲ್ಲಿ ಬ್ಯಾಂಗ್‌ಕಾಕ್ ಭೇಟಿಗೆ, ಆಮೇಲೆ ಕೊಲಂಬೊ, ಕೊರಿಯಾ, ಮಲಯೆಷ್ಯಾ, 1985 ರಲ್ಲಿ ಜಿನಿವಾ ಭೇಟಿಗೆ ಏರ್ಪಾಟು ಮಾಡಿದ್ದಲ್ಲದೆ ಸಂಪೂರ್ಣ ಆರ್ಥಿಕ ಹೊಣೆ ಹೊತ್ತಿದ್ದರು ಇದಕ್ಕೆ ರಾಮಸ್ವರೂಪ್ ಪಿ.ಎಸ್. ಲೇಖಿ ಇಬ್ಬರಿಗೂ ಸಂಭಾವನೆ ತೆತ್ತಿದ್ದರು.

ರಾಮಸ್ವರೂಪ್ ಇಸ್ರೇಲಿ ಸರ್ಕಾರದ ಪರವಾಗಿಯೂ ಹಲವು ಕೆಲಸಗಳನ್ನು ಮಾಡಿದ್ದ. ಇಸ್ರೇಲಿ ಕಚೇರಿಗೆ ಎಲ್ಲಾ ರಾಜ್ಯಸಭೆ, ಲೋಕಸಭೆಯ ಸದಸ್ಯರ ವಿವರಗಳನ್ನು ಒದಗಿಸುವುದು, ಕೆಲವು ಎಂ. ಪಿ ಗಳ ಇಸ್ರೇಲ್ ಭೇಟಿಯ ಏರ್ಪಾಟಿಗೆ ಪ್ರಯತ್ನ, ವಿದೇಶ ರಾಜ್ಯಮಂತ್ರಿಯ ಜತೆಗೆ ಇಸ್ರೇಲಿ ಅಧಿಕಾರಿಗಳ ಭೇಟಿ ಏರ್ಪಾಡು ಜನತಾ ಪಾರ್ಲಿಮೆಂಟರಿ ಪಕ್ಷದಲ್ಲಿ ಮಂಡಿಸಿದ ವಿದೇಶಿ ಸಚಿವ ಖಾತೆಯ ವರದಿಯ ಪ್ರತಿ ಇಸ್ರೇಲಿ ಅಧಿಕಾರಿಗಳಿಗೆ ಒಪ್ಪಿಸಿದ್ದು — ರಾಮಸ್ವರೂಪ್ ತನ್ನ ಇಸ್ರೇಲಿ "ಯಜಮಾನರಿಗೆ" ಮಾಡಿದ ಸೇವೆ. ದೆಹಲಿಯಲ್ಲಿ ಇಸ್ರೇಲಿ ರಾಯಭಾರ ಕಚೇರಿ ತೆರೆಯುವಂತೆ ಪ್ರಭಾವ ಬೀರುವುದೇ ಈ ಎಲ್ಲಾ ಕಾರ್ಯಗಳ ಹಿಂದಿನ ಉದ್ದೇಶ

ಸಂಶೋಧನೆಯ ಮರೆ

ಈ ಕಾರ್ಯಗಳಿಗೆ ತೆರೆಯಾಗಿ ಮತ್ತು ಆರ್ಥಿಕ ಸಹಾಯದ ಮೂಲಕವಾಗಿ "ಯೂರೋಪಿಯನ್ ಫೌಂಡೇಶನ್ ಫಾರ್ ಸೋಶಿಯೊಲೊಜಿಕಲ್ ರಿಸರ್ಚ್" ಫ್ರಾಂಕ್‌ಫರ್ಟ್, ರಿಪೋರ್ಟ್ಸ್ ಬ್ಯೂರೋ" ಹೆಲ್ಸಿಂಕಿಯ "ಈಸ್ಟ್ ವೆಸ್ಟ್ ಸೆಂಟರ್" ಮುಂತಾದ ಸಂಸ್ಥೆಗಳನ್ನ ಉಪಯೋಗಿಸಲಾಯಿತು. ಈ ಸಂಸ್ಥೆಗಳಿಗೆ ಮಾಹಿತಿ ಒದಗಿಸುವ ನೆಪದಲ್ಲಿ, ಮರೆಯಲ್ಲಿ ಅಮೇರಿಕನ್ ಅಧಿಕಾರಿಗಳಿಗೆ ಒಪ್ಪಿಸಲಾಗುತ್ತಿತ್ತು. ಈ ಕಾರ್ಯಾಚರಣೆಗೆ ಆರ್ಥಿಕ ಮೂಲ ಈ ಸಂಸ್ಥೆಗಳಿಂದ ಈ ಸೇವೆಗೆ ಬಂದ ಸಂಭಾವನೆ ಎಂದು ತೋರಿಸಲಾಗುತ್ತಿತ್ತು. ಆದರೆ ಕೆಲವು ಅಂಚೆ ರವಾನೆಗಳನ್ನು ಬಿಟ್ಟರೆ, ವಹಿವಾಟು ನಡೆಯುತ್ತಿದ್ದದ್ದು ಅಮೇರಿಕನ್, ಪ.ಜರ್ಮನ್ ರಾಯಭಾರ ಕಚೇರಿ ಮತ್ತು ರಾಮಸ್ವರೂಪ್‌ನ ನಡುವೆ. ತೈವಾನ್ ಸರ್ಕಾರ ಭೇಟಿಗಳನ್ನು ಏರ್ಪಡಿಸುವ, ಆರ್ಥಿಕ ಹೊಣೆ ಹೊತ್ತುಕೊಳ್ಳುವ ಮೂಲಕ ಈ ಕಾರ್ಯಾಚರಣೆಯಲ್ಲಿ ಭಾಗಿಯಾಗಿತ್ತು.

ರಾಮಸ್ವರೂಪ್ ಅಮೇರಿಕನ್, ಪ.ಜರ್ಮನಿಯ ಅಧಿಕಾರಿಗಳನ್ನು ಗುಟ್ಟಾಗಿ ಅವರ ಮನೆಯಲ್ಲಿ ಅಥವಾ ಕಚೇರಿಯಲ್ಲಿ ಸಂಧಿಸುತ್ತಿದ್ದ. ಇವನ ರಹಸ್ಯ ನಂಬರ್ 72 ಆಗಿತ್ತು. ಅವನ ಕಾರ್ಯಾಚರಣೆಯ ಅವಧಿ, ಅವನ ಪ್ರಯೋಜನ ಪಡೆದ ಅಧಿಕಾರಿಗಳ ಸಂಖ್ಯೆ ನೋಡಿದರೆ, ಪಕ್ಕಾ ಮಾಹಿತಿ, ದಾಖಲೆಗಳನ್ನು ಸಂಗ್ರಹಿಸುವುದರಲ್ಲಿ ರಾಮಸ್ವರೂಪ್ ನಿಷ್ಣಾತ ಮತ್ತು ನಂಬಿಗಸ್ತನಾಗಿದ್ದ ಎಂದು ತಿಳಿದು ಬರುತ್ತದೆ ಇಂತಹ "ನಂಬಿಗಸ್ತ"ನಿಗೆ ಸೇವೆಗೆ ತಕ್ಕ ಹಣ ತೆರುವುದು ಸ್ವಾಭಾವಿಕ.

ಈಗಾಗಲೇ ಹೇಳಿದ ಹಾಗೆ ಇದು ಅಮೆರಿಕನ್ ಸಾಮ್ರಾಜ್ಯಶಾಹಿ ಕಾರ್ಯಾಚರಣೆಯ ಒಂದು ಭಾಗ ಮಾತ್ರ. ಇನ್ನು ಎಷ್ಟು ರಾಮಸ್ವರೂಪಗಳಿದ್ದಾರೋ? ನಮ್ಮ ಗೂಢಚಾರ ಸಂಸ್ಥೆಗಳು ಇಂತಹವರ ಮೇಲೆ ಕಣ್ಣಿಡಲು ಸಶಕ್ತವಾಗಿವೆಯೆ? ●

ಸಿಐಟಿಯು ರಾಜ್ಯ ಮಂಡಳಿ ಸಭೆಯ ನಿರ್ಣಯಗಳು

(4ನೇ ಪುಟದಿಂದ)

ಸೆಳೆಯಲು ವಿಧಾನಸೌಧ ಚಲೋ ಕಾರ್ಯಕ್ರಮ ನಡೆಸಲು ಸಭೆಯು ನಿರ್ಧರಿಸಿತು. ರಾಜ್ಯಾದ್ಯಂತ ಇರುವ ಕಾರ್ಮಿಕರು ಸಾವಿರಗಟ್ಟಲೆಯಲ್ಲಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಸಭೆಯು ಕರೆ ನೀಡಿತು.

ಪೆಟ್ರೋಲಿಯಂ ಉತ್ಪನ್ನಗಳು, ಆಹಾರ ಧಾನ್ಯಗಳು ಇತ್ಯಾದಿಗಳ ಬೆಲೆಗಳನ್ನು ಕೇಂದ್ರ ಸರಕಾರವು ಮುಂಗಡ ಪತ್ರ ಮಂಡಿಸುವ ಮೊದಲೇ ಏಕಪಕ್ಷೀಯವಾಗಿ ವಿಪರೀತವಾಗಿ ಏರಿಸಿರುವುದನ್ನು ಖಂಡಿಸಿದ ಸಭೆಯು ಫೆಬ್ರವರಿ 19 ರಂದು ರಾಜ್ಯಾದ್ಯಂತ ಕಾರ್ಮಿಕರು ಪ್ರದರ್ಶನ, ಮೆರವಣಿಗೆ, ಸಭೆ ಇತ್ಯಾದಿಗಳನ್ನು ನಡೆಸುವ ಮೂಲಕ ಬೆಲೆ ಏರಿಕೆಯನ್ನು ಪ್ರತಿಭಟಿಸಬೇಕೆಂದು ಕರೆ ನೀಡಿತ್ತು

ಕ್ಯಾಶುಯಲ್ ಕಾರ್ಮಿಕರ ಸೇವೆಯನ್ನು ಖಾಯಂಗೊಳಿಸಬೇಕೆಂದು ಒತ್ತಾಯಿಸಿ ಅಂಚೆ ತಂತಿ ನೌಕರರು ನಡೆಸುತ್ತಿರುವ ರಾಷ್ಟ್ರ ವ್ಯಾಪಿ ಹೋರಾಟಕ್ಕೆ ಸಭೆಯು ಬೆಂಬಲ ವ್ಯಕ್ತಪಡಿಸಿತು.

ಸರಕಾರಿ ನೌಕರರನ್ನು ಮನಬಂದಂತೆ ಸೇವೆಯಿಂದ ವಜಾಗೊಳಿಸಲು ಅಧಿಕಾರ ನೀಡುವ ಸಂವಿಧಾನದ 311 (2)(ಎ) (ಬಿ) (ಸಿ) ಕಲಮುಗಳನ್ನು ರದ್ದುಗೊಳಿಸಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಅಂಗೀಕರಿಸಿದ ಸಭೆಯು ಈ ಬೇಡಿಕೆಗಳಿಗಾಗಿ ದೇಶದ [illegible]0 ಲಕ್ಷ ರಾಜ್ಯ ಸರಕಾರಿ ನೌಕರರು ಫೆಬ್ರವರಿ 26 ರಂದು ನಡೆದ ಒಂದು ದಿನದ ಮುಷ್ಕರಕ್ಕೆ ಬೆಂಬಲಾರ್ಥವಾಗಿ ಪ್ರದರ್ಶನ, ಮೆರವಣಿಗೆ, ಸಭೆ ಇತ್ಯಾದಿಗಳನ್ನು ನಡೆಸಲು ಕಾರ್ಮಿಕರಿಗೆ ಸಭೆಯು ಕರೆನೀಡಿತ್ತು

ಜಾತೀಯತೆಯ ಆಧಾರದಲ್ಲಿ ಕಾರ್ಮಿಕರ ಐಕ್ಯತೆಯನ್ನು ಒಡೆಯುವ ಪ್ರಯತ್ನಗಳ ಬಗ್ಗೆ ಗಂಭೀರ ಕಳವಳ ವ್ಯಕ್ತಪಡಿಸಿದ ಸಭೆಯು ಮೀಸಲಾತಿ ಅನ್ವಯವಾಗುವ ವರ್ಗಗಳ ವಿರುದ್ಧ ಇತರ ವರ್ಗಗಳನ್ನು ಸಂಘಟಿಸುವ ಪ್ರಯತ್ನಗಳನ್ನು ಖಂಡಿಸಿತು.

ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಲ್ಲಿ ಸ್ಥಾಯೀ ನಿಬಂಧನೆಗಳನ್ನು ತಿದ್ದುಪಡಿ ಮಾಡಿ ಕಾರ್ಮಿಕರ ಪ್ರಜಾಪ್ರಭುತ್ವ ಹಕ್ಕುಗಳನ್ನು ಮೊಟಕುಗೊಳಿಸಲು ನಡೆಸುತ್ತಿರುವ ಕೇಂದ್ರ ಸರಕಾರದ ಪ್ರಯತ್ನಗಳನ್ನು ಸಭೆಯು ಖಂಡಿಸಿತು

ಕ್ಲೋಶರ್, ಲಾಕೌಟ್ ಇತ್ಯಾದಿಗಳ ಮೂಲಕ ಲಕ್ಷಾಂತರ ಕಾರ್ಮಿಕರು ನಿರುದ್ಯೋಗಿಗಳಾಗುತ್ತಿರುವ ಕುರಿತು ಗಂಭೀರ ಕಳವಳ ವ್ಯಕ್ತಪಡಿಸಿದ ಸಭೆಯು ಈಗಾಗಲೇ ಭೀಕರವಾಗುತ್ತಿರುವ ನಿರುದ್ಯೋಗದ ಪರಿಸ್ಥಿತಿಯಲ್ಲಿ ಕಂಪ್ಯೂಟರ್‌ಗಳನ್ನು ವ್ಯಾಪಕವಾಗಿ ಬಳಸುವ ಸರಕಾರದ ನೀತಿಯಿಂದಾಗಿ ನಿರುದ್ಯೋಗವು ಇನ್ನಷ್ಟು ಹೆಚ್ಚಾಗುವುದೆಂದು ಎಚ್ಚರಿಸಿದ ಸಭೆಯು ಈ ಅಪಾಯಕಾರಿ ಪರಿಸ್ಥಿತಿಗೆ ಕಾರಣವಾದ ಸರಕಾರದ ದೋಷಪೂರ್ಣ ಆರ್ಥಿಕ ನೀತಿಯನ್ನು ಬದಲಿಸಬೇಕೆಂದು ಸರಕಾರವನ್ನು ಸಭೆಯು ಒತ್ತಾಯಿಸಿತು.

ಸಾರಾಯಿ ಬಾಟ್ಲಿಂಗ್

ಈ ಹಗರಣದ ಕುರಿತು ಚರ್ಚಿಸಿದ ಸಭೆಯು ಖಾಸಗಿ ಸಂಸ್ಥೆಗೆ ಗುತ್ತಿಗೆ ಕೊಟ್ಟದ್ದರಿಂದಾಗಿ ಸರಕಾರದ ಖಜಾನೆಗೆ ಅಪಾರ ನಷ್ಟವಾಗಿರುವುದನ್ನು ಗಮನಿಸಿ, ಇದಕ್ಕೆ ಕಾರಣಕರ್ತರಾದವರನ್ನು ಶಿಕ್ಷಿಸಬೇಕೆಂದೂ ಬಾಟ್ಲಿಂಗ್ ಗುತ್ತಿಗೆಯನ್ನು ಮೈಸೂರ್ ಶುಗರ್ ಸಂಸ್ಥೆಗೆ ವಹಿಸಿಕೊಡಬೇಕೆಂದೂ ಸಭೆ ಒತ್ತಾಯಿಸಿತು.

ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಸಿ. ನಂಜುಂಡಪ್ಪನವರು ಮಂಡಿಸಿದ ವರದಿಯ ಮೇಲೆ 27ಮಂದಿ ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದರು ವರದಿಯನ್ನು ಸಭೆಯು ಅಂಗೀಕರಿಸಿತು. ○

ಎಸ್.ಎಫ್.ಐ. 4ನೇ ರಾಯಚೂರು ಜಿಲ್ಲಾ ಸಮ್ಮೇಳನ

ಇದೇ ಫೆಬ್ರವರಿ 6 ಹಾಗೂ 7ರಂದು ಗಂಗಾವತಿ ತಾಲೂಕಿನಲ್ಲಿ ಈ ಸಮ್ಮೇಳನ ಜರುಗಿತು. ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ|| ಅನಿಲ್‌ಕುಮಾರ್ ಮಂಡಿಸಿದ ಸಂಘಟನಾ ವರದಿ ಹಾಗೂ ಕೇಂದ್ರ ಸರಕಾರದ ನೂತನ ಶಿಕ್ಷಣ ನೀತಿಯ ಬಗ್ಗೆ ಜಿಲ್ಲೆಯ ಎಲ್ಲಾ ತಾಲೂಕಿನಿಂದ ಬಂದಿದ್ದ 100 ಪ್ರತಿನಿಧಿಗಳು ಕೂಲಂಕುಷವಾಗಿ ಚರ್ಚಿಸಿದರು. ರಾಯಚೂರು ಜಿಲ್ಲೆಯಲ್ಲಿ ಕೃಷಿ ವಿಶ್ವವಿದ್ಯಾಲಯ ಸ್ಥಾಪನೆಯಾಗಬೇಕು ಎಂಬ ಬೇಡಿಕೆಯೂ ಸೇರಿದಂತೆ ಸಮ್ಮೇಳನ ರಾಜ್ಯದಲ್ಲಿ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಹಲವಾರು ನಿರ್ಣಯಗಳನ್ನು ಕೈಗೊಂಡಿತು. ಪ್ರಜಾಪ್ರಭುತ್ವ ಚಳುವಳಿ, ಜನಸಾಮಾನ್ಯರ ಸಮಸ್ಯೆಗಳು, ಅಂತರ್ರಾಷ್ಟ್ರೀಯ ಸನ್ನಿವೇಶಗಳ ಬಗ್ಗೆಯೂ ಸಮ್ಮೇಳನ ನಿರ್ಣಯಗಳನ್ನು ಅಂಗೀಕರಿಸಿತು. ರಾಯಚೂರು ಜಿಲ್ಲೆಯಲ್ಲಿ ಎಸ್.ಎಫ್.ಐ ಮೇಲೆ ಎಬಿವಿಪಿ ದಾಳಿಯನ್ನು ಸಮ್ಮೇಳನ ಖಂಡಿಸಿತು.

ಸಮ್ಮೇಳನ ಆರಿಸಿದ ಹೊಸ ಜಿಲ್ಲಾ ಸಮಿತಿ ಹೀಗಿದೆ – ಕಾ| ಅನಿಲ್ ಕುಮಾರ್ - ಅಧ್ಯಕ್ಷ, ಕಾ| ರಾಮುಗೌಡ - ಉಪಾಧ್ಯಕ್ಷ, ಕಾ| ಶೇಷಾದ್ರಿ - ಕಾರ್ಯದರ್ಶಿ, ಕಾ| ವೆಂಕಟೇಶ - ಸಹಕಾರ್ಯದರ್ಶಿ, ಕಾ| ಪ್ರಭಾವತಿ - ಖಜಾಂಚಿ ಸಂಗಾತಿಗಳಾದ ಚಂದ್ರಶೇಖರ್, ಸೋಮನಗೌಡ, ರುದ್ರಪ್ಪ ಬಸವಂತರಾಯ, ಕೆ. ಬಸವರಾಜ್, ಬಸವರಾಜ ಸಜ್ಜನ ಹಾಗೂ ಅಮ್ಮಪ್ಪ ಉಪ್ಪಾರ ಸಮಿತಿಯ ಸದಸ್ಯರಾಗಿ ಸರ್ವಾನುಮತದಿಂದ ಆಯ್ಕೆಯಾದರು.

ಫೆಬ್ರವರಿ 7 ರಂದು ಸಂಜೆ ಮೆರವಣಿಗೆ ಹಾಗೂ ನ್ಯಾಯವಾದಿಗಳಾದ ಕಾ| ವೆಂಕಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯೊಡನೆ ಸಮ್ಮೇಳನ ಯಶಸ್ವಿಯಾಗಿ ಮುಕ್ತಾಯಗೊಂಡಿತು.

ಕ್ಯೂಬಾ ಕಮ್ಯುನಿಸ್ಟ್ ಪಕ್ಷದ ಮೂರನೇ ಮಹಾಧಿವೇಶನ

ಜಾಗತಿಕ ಪ್ರತಿಗಾಮಿತ್ವದ ಭದ್ರ ಕೋಟೆಯಾದ ಅಮೆರಿಕಾ ಸಂಯುಕ್ತ ಸಂಸ್ಥಾನಗಳಿಂದ ಕೇವಲ 60 ಮೈಲಿಗಳ ದೂರದಲ್ಲಿರುವ ಹವಾನಾ ನಗರದಲ್ಲಿ ಕ್ಯೂಬಾ ಕಮ್ಯುನಿಸ್ಟ್ ಪಕ್ಷದ ಮೂರನೇ ಮಹಾಧಿವೇಶನ ಫೆಬ್ರವರಿ 4 ರಿಂದ 7 ರವರೆಗೆ ನಗರದ ಹೊರವಲಯದಲ್ಲಿರುವ ಹಾಲ್ ಆಫ್ ಕಾಂಗ್ರೆಸ್‌ನಲ್ಲಿ ಅತ್ಯುತ್ಸಾಹದಿಂದ ಜರುಗಿತು ಒಟ್ಟು 1777 ಪ್ರತಿನಿಧಿಗಳು ಈ ಮಹಾಧಿವೇಶನದಲ್ಲಿ ಭಾಗವಹಿಸಿದರು ಮೂರು ಖಂಡಗಳ 196 ವಿದೇಶೀ ಪ್ರತಿನಿಧಿ ನಿಯೋಗ ಅತಿಥಿಗಳಾಗಿ ಭಾಗವಹಿಸಿದವು. ಸಿ.ಪಿ.ಐ (ಎಂ) ಪರವಾಗಿ ಪಾಲಿಟ್‌ಬ್ಯೂರೋ ಸದಸ್ಯ ಕಾ|| ಹರಿಕಿಶನ್‌ಸಿಂಗ್ ಸುರ್ಜಿತ್ ಹಾಜರಿದ್ದರು.

ಕಾರ್ಮಿಕ ವರ್ಗ ಆಳುತ್ತಿರುವ ಅಮೆರಿಕಾ ಖಂಡದ ಪ್ರಥಮ ದೇಶವೆಂಬ ಹೆಗ್ಗಳಿಕೆಯ ಕ್ಯೂಬಾದ ಒಟ್ಟು ಜನಸಂಖ್ಯೆ ಒಂದು ಕೋಟಿ. ಇದರಲ್ಲಿ ಪಕ್ಷದ ಸದಸ್ಯರ ಸಂಖ್ಯೆ 2,53,638 ಯುವ ಕಮ್ಯುನಿಸ್ಟ್ ಯೂನಿಯನ್‌ನ ಸದಸ್ಯ ಸಂಖ್ಯೆ 597 853 ಅಂದರೆ ಕ್ಯೂಬಾದ ಪ್ರತಿ ಹತ್ತರಲ್ಲಿ ಒಬ್ಬ ಕಮ್ಯುನಿಸ್ಟ್.

ಕಳೆದ ಐದು ವರ್ಷಗಳಲ್ಲಿ ಸರಾಸರಿ ಕ್ಯೂಬನ್ ನಾಗರಿಕನ ಆದಾಯ 26.4 ಶೇಕಡಾ ಹೆಚ್ಚಿದೆ. ಜೀವನ ಮಟ್ಟ ಸರ್ವತೋಮುಖವಾಗಿ ಏರಿದೆ. ಸಾರ್ವಜನಿಕ ಆರೋಗ್ಯ ಯೋಜನೆಗಳು 5 % ಹೆಚ್ಚಿವೆ ಸರಾಸರಿ ಆಯುಮಾನ 74 2 ವರ್ಷಕ್ಕೇರಿದೆ ಫಿಡೆಲ್ ಕ್ಯಾಸ್ಟ್ರೋ ಅಧಿವೇಶನದಲ್ಲಿ ಮಂಡಿಸಿದ ವರದಿಯಿಂದ ಇದು ವ್ಯಕ್ತಗೊಂಡಿದೆ. ಮುಂದಿನ ಐದು ವರ್ಷಗಳಲ್ಲಿ ಇದನ್ನು ಮತ್ತಷ್ಟು ಹೆಚ್ಚಿಸುವ ರೂಪುರೇಷೆಗಳನ್ನು ಕಾಸ್ಟ್ರೋ ಅಧಿವೇಶನದಲ್ಲಿ ಮಂಡಿಸಿದರು. ಸುತ್ತಮುತ್ತಲಿನ ಬಂಡವಾಳಶಾಹೀ ಪದ್ಧತಿಯಲ್ಲಿ ತೀವ್ರ ಬಿಕ್ಕಟ್ಟು, ನಿರುದ್ಯೋಗ, ಹಣದುಬ್ಬರ, ಹಸಿವು ಬಡತನ, ದಾರಿದ್ರ್ಯಗಳು ನಿತ್ಯಸಂಗತಿಗಳಾಗಿರುವಾಗ ಕ್ಯೂಬಾದಂತಹ ಪುಟ್ಟ ದೇಶದ ಈ ಸಾಧನೆ ಸಮಾಜವಾದೀ ಪದ್ಧತಿಯ ಶ್ರೇಷ್ಠತೆಯನ್ನು ಮತ್ತೊಮ್ಮೆ ಸಾರಿದೆ. ಕ್ಯೂಬಾಕ್ಕೆ ತನ್ನ ದೇಶದಲ್ಲಿ ಸಮಾಜವಾದೀ ಪದ್ಧತಿಯನ್ನು ದೃಢಗೊಳಿಸಿ ತನ್ನ ಸ್ವಾಧೀನತೆಯನ್ನು ರಕ್ಷಿಸಿಕೊಳ್ಳುವ ಸಾಮರ್ಥ್ಯ ಬಂದಿದೆ ಮಾತ್ರವಲ್ಲ, ಅಂತರ್ರಾಷ್ಟ್ರೀಯ ರಂಗದಲ್ಲಿ ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯತೆಯ ಬಾವುಟವನ್ನು ಸದಾ ಎತ್ತಿ ಹಿಡಿದು ಜಗತ್ತಿನಾದ್ಯಂತ ಕ್ರಾಂತಿಕಾರ ಹೋರಾಟಗಳಿಗೆ ಬೆಂಬಲನೀಡಲು ಅದು ಶಕ್ತವಾಗಿ ನಿಂತಿದೆ.

ಸಂಪೂರ್ಣ ಸಂಘಟಿತವಾಗಿರುವ ಕ್ಯೂಬಾ ಜನತೆ

ಕ್ಯೂಬಾದ ಒಂದು ಕೋಟಿ ಜನಸಂಖ್ಯೆಯಲ್ಲಿ 30 ಲಕ್ಷ ಕಾರ್ಮಿಕರು ಅವರಲ್ಲಿ 99.5% ಮಂದಿ ಕಾರ್ಮಿಕ ಸಂಘಗಳಲ್ಲಿ ಸಂಘಟಿತರಾಗಿದ್ದಾರೆ. ಸಣ್ಣ ರೈತರ ರಾಷ್ಟ್ರೀಯ ಸಂಘದಲ್ಲಿ ರೈತರು ಸಂಘಟಿತರಾಗಿದ್ದಾರೆ. ಸಹಕಾರೀ ಕೃಷಿ ಅಭಿವೃದ್ಧಿ ಪಡಿಸುವುದರಲ್ಲ ಈ ಸಂಘ ಮಹತ್ವದ ಪಾತ್ರ ವಹಿಸಿದೆ.

ಮಹಿಳೆಯರು. ಕ್ಯೂಬಾ ಮಹಿಳಾ ಒಕ್ಕೂಟದಡಿ ಸಂಘಟಿತರಾಗಿದ್ದಾರೆ ಈ ಸಂಘಟನೆಯ ಸದಸ್ಯತ್ವ 31 ಲಕ್ಷ ಅಂದರೆ ಕ್ಯೂಬಾದ 80% ಮಹಿಳೆಯರು ಈ ಸಂಘಟನೆಯ ಸದಸ್ಯರು ವಿಶ್ವವಿದ್ಯಾಲಯ ವಿದ್ಯಾರ್ಥಿ ಒಕ್ಕೂಟ ಹಾಗೂ ಹಿರಿಯ ಪ್ರೌಢಶಾಲಾ ವಿದ್ಯಾರ್ಥಿ ಒಕ್ಕೂಟದ ಸದಸ್ಯ ಸಂಖ್ಯೆ 45,90,000 ಜೋಸ್ ಮಾರ್ಟಿ ಪಯೋನಿರ್ಸ್ ಸಂಘಟನೆ ಸದಸ್ಯತ್ವ 17 ಲಕ್ಷ.

ದೇಶಾದ್ಯಂತ ಹರಡಿರುವ ಕ್ರಾಂತಿ ರಕ್ಷಣಾ ಸಮಿತಿಗಳ ಒಟ್ಟು ಸದಸ್ಯತ್ವ 65 ಲಕ್ಷ 37 ಸಾವಿರ. ಅಂದರೆ ಕ್ಯೂಬಾದ 83 9% ಇದರ ಸದಸ್ಯರು.

ಒಟ್ಟಿನಲ್ಲಿ ಕ್ಯೂಬಾದ ಪ್ರತಿಯೊಬ್ಬ ನಾಗರಿಕ ಒಂದಿಲ್ಲೊಂದು ಸಾಮೂಹಿಕ ಸಂಘಟನೆಯ ಚಟುವಟಿಕೆಗಳಲ್ಲಿ ನಿರತನಾಗಿದ್ದಾನೆ. ಈ ಮೂಲಕ ಕ್ಯೂಬಾದ ಸಾಮೂಹಿಕ ಸಂಘಟನೆಗಳು ಜನಸಮೂಹಗಳನ್ನು ಕ್ಯೂಬಾ ಕಮ್ಯುನಿಸ್ಟ್ ಪಕ್ಷದ ಬೆನ್ನ ಹಿಂದೆ ಅಣಿನೆರಿಸಿ ಕ್ಯೂಬಾ ಕ್ರಾಂತಿಯ ಪರಿಧಿ ಹೆಚ್ಚಿಸಿ ಅದನ್ನು ದೃಢಗೊಳಿಸುವಲ್ಲಿ ವಹಿಸುವ ಪಾತ್ರ ಅತ್ಯಂತ ಹಿರಿದು.

ಫಿಲಿಪೈನ್ಸ್ : ಸರ್ವಾಧಿಕಾರಿಯ ಪಲಾಯನ

24 ವರ್ಷಗಳ ಹಿಂದೆ ಕಮ್ಯುನಿಸ್ಟ್ ಚಟುವಟಿಕೆಗಳ ಬೆದರಿಕೆ ತೋರಿಸಿ ಲಷ್ಕರಿ ಶಾಸನ ಹೇರಿ, ಅಂದಿನಿಂದ ಅಮೆರಿಕನ್ ಸಾಮ್ರಾಜ್ಯ ಶಾಹಿಗಳ ಉದಾರಬೆಂಬಲದಿಂದ ಫಿಲಿಪೈನ್ ದೇಶದ ಮೇಲೆ ಸರ್ವಾಧಿಕಾರ ನಡೆಸಿಕೊಂಡು ಬಂದು, ಆ ದೇಶವನ್ನು ಸುಮಾರಾಗಿ ಅಸಂಸ್ಥ(u s a) ವಸಹಾತು ವಿನಂತಿ ಮಾಡಿ ಫೆಬ್ರವರಿ 7ರಂದು ನಡೆದ ರಾಷ್ಟ್ರಾಧ್ಯಕ್ಷ ಚುನಾವಣೆಯಲ್ಲಿ ಮೋಸ ನಡೆಸಿ ತಾನು ಗೆದ್ದೆನೆಂದು ಘೋಷಿಸಿಕೊಂಡ ಫರ್ಡಿನೆಂಡ್ ಮಾರ್ಕೋಸ್ ಕೊನೆಗೂ ದೇಶ ಬಿಟ್ಟು ಪಲಾಯನ ಮಾಡಿದ್ದಾನೆಂದು ತಿಳಿದು ಬಂದಿದೆ.

ಈ ಚುನಾವಣೆಯಲ್ಲಿ ನೂರುಮಂದಿ ಬಲಪಂಥೀಯ ಗೂಂಡಾಪಡೆಗಳಿಂದ ಕೊಲ್ಲಲ್ಪಟ್ಟಿದ್ದು, ವಿದೇಶಿ ಪರಿಣಿತರ ಎರಡು ತಂಡಗಳು, ವಿದೇಶಿ ಪತ್ರಕರ್ತರು, ಮುಕ್ತ ಚುನಾವಣೆಗಾಗಿ ರಾಷ್ಟ್ರೀಯ ನಾಗರೀಕ ಆಂದೋಲನ, ರೋಮನ್ ಕ್ಯಾಥೋಲಿಕ್ ಚರ್ಚ್ ಮತ್ತು ಸ್ವತಃ ತಾನೇ ಕಳುಹಿಸಿದ ಅಮೇರಿಕನ್ ತಂಡ ಬಹಳಷ್ಟು ಮೋಸ ನಡೆದಿದೆಯೆಂದು ಘೋಷಿಸಿದರೂ ರೀಗನ್ "ಅದು ನಡೆದಿದ್ದರೆ ಎರಡೂ ಕಡೆಯಿಂದ ನಡೆದಿದೆ" ಎಂದು ಹೇಳುವ ಭಂಡತನ ತೋರಿದರು ಲೆಬನಾನ್‌ನ ಬಿಕ್ಕಟ್ಟನ್ನು ದೀರ್ಘಗೊಳಿಸಿದ ಕುಖ್ಯಾತಿಯ ಫಿಲಿಪ್ ಹಬೀಬರನ್ನು ಮಾರ್ಕೋಸ್ ಹಾಗೂ ವಿರೋಧಿ ಅಭ್ಯರ್ಥಿ ಶ್ರೀಮತಿ ಅಕ್ವಿನೋರವರ ನಡುವೆ "ಮಧ್ಯಸ್ಥಿಕೆ" ನಡೆಸಲು ಕಳಿಸಿದರು ಆದರೆ ಈ ನಡುವೆ ಅಕ್ವಿನೊ ಬೆಂಬಲವಾಗಿ ಫಿಲಿಪೈನ್ಸ್ ಜನತೆಯ ವೀರ ಹೋರಾಟದಿಂದ, ಮಾರ್ಕೋಸ್‌ರ ಸ್ಥಿತಿ ದುರ್ಬಲಗೊಳ್ಳುತ್ತಿರುವುದನ್ನು ಕಂಡ ರೀಗನ್ ಹಾಗೂ ಅಮೇರಿಕನ್ ಸರ್ಕಾರ ತನ್ನ ದೀರ್ಘಕಾಲದ ಮಿತ್ರನಿಗೆ ಕೈಕೊಟ್ಟು ಆತನನ್ನು ಅಧ್ಯಕ್ಷ ಪದವಿಯಿಂದ ಕೆಳಗಿಳಿಯುವಂತೆ ಹೇಳಿದರು ಜನತೆಯ ವಿಪರೀತ ಕೋಪದ ಎದುರು ತನ್ನ ದಬ್ಬಾಳಿಕೆಯನ್ನು ಮುಂದುವರಿಸಲಾಗದೆ ಪಲಾಯನಕ್ಕೆ ಸಿದ್ಧವಾಗಲಾರಂಭಿಸಿದ ಮಾರ್ಕೋಸ್‌ಗೆ ಆಶ್ರಯ ನೀಡುವ ಆಶ್ವಾಸನೆ ಕೊಟ್ಟಿರುವ ರೀಗನ್ ಸರ್ಕಾರ ಇನ್ನೊಂದೆಡೆ ಅಕ್ವಿನೋ ನಿಜವಾದ ಚುನಾಯಿತ ಅಧ್ಯಕ್ಷರೆಂದು ಘೋಷಿಸಿ ಇನ್ನೊಂದು ಚಾರಿತ್ರಿಕವಾದ ಪ್ರಜಾಪ್ರಭುತ್ವ ಪ್ರಕ್ರಿಯೆಯೆಂದು ವರ್ಣಿಸಿ ತನ್ನ ಮುಖವುಳಿಸಿಕೊಳ್ಳಲು ವ್ಯರ್ಥ ಪ್ರಯತ್ನ ನಡೆಸುತ್ತಿದೆ.

ಅಮೇರಿಕನ್ ಸಾಮ್ರಾಜ್ಯಶಾಹಿಗಳು ಇದುವರೆಗೆ ಮಾರ್ಕೋಸ್ ನಂತಹ ಅಪ್ಪಟ ಪ್ರತಿಗಾಮಿಗೆ ಪೂರ್ಣ ಬೆಂಬಲ ನೀಡಿಕೊಂಡು ಬಂದರೂ ಈಗ ಅವನ ಸ್ಥಿತಿ ಶೋಚನೀಯಗೊಂಡಾಗ ಕೈಕೊಡಲು ಕಾರಣ ಫಿಲಿಪೈನ್ಸ್‌ನಲ್ಲಿ ಅವರು ಪಡೆದಿರುವ ಕ್ಲಾರ್ಕ್ ವಿಮಾನ ನೆಲೆ ಹಾಗೂ ಸುಬಿಕ್ ನೌಕಾನೆಲೆ. ಇವೆರಡೂ ಅಸಂಸ್ಥಾದ ಹೊರಗಿರುವ ಅದರ ಎರಡು ಅತ್ಯಂತ ದೊಡ್ಡ ಹಾಗೂ ಅತ್ಯಂತ ಸಾಮರಿಕ ಮಹತ್ವ ಹೊಂದಿರುವ ನೆಲೆಗಳು ಸುಬಿಕ್ ನೌಕಾನೆಲೆಯಲ್ಲಿ ಅಮೆರಿಕಾದ 80 ಹಡಗುಗಳು ಹಾಗೂ 550 ವಿಮಾನಗಳು ಇವೆ. ಇಲ್ಲಿರುವ 4500 ಫಿಲಿಫೈನ್ ದೇಶೀಯರು ಒಂದು ತಿಂಗಳಲ್ಲಿ 70 ಹಡಗುಗಳನ್ನು ಅಮೆರಿಕನ್ ಕಾರ್ಮಿಕರಿಗೆ ಕೊಡುವ ಸಂಬಳದ 1/7(ಏಳರಲ್ಲಿ ಒಂದಂಶ) ಸಂಬಳಕ್ಕೇ ರಿಪೇರಿ ಮಾಡಿಕೊಡುತ್ತಾರೆ. ಅಲ್ಲದೆ 500 ಅಮೆರಿಕನ್ ಬಹುರಾಷ್ಟ್ರೀಯ ಸಂಸ್ಥೆಗಳು ಈ ದೇಶದ ಆರ್ಥಿಕ ಚಟುವಟಿಕೆಯ 10% ವನ್ನು ಆವರಿಸಿಕೊಂಡಿವೆ. ತನ್ನ ಈ ಸೈನಿಕ, ಆರ್ಥಿಕ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವುದೇ ರೀಗನ್ ಸರಕಾರದ ಪ್ರಥಮ ಆದ್ಯತೆ. ಅಮೆರಿಕನ್ ಸಾಮ್ರಾಜ್ಯಶಾಹಿಗಳ ಬೆಂಬಲವಿಲ್ಲದಿದ್ದರೆ ಜಗತ್ತಿನಲ್ಲಿಲ್ಲೂ ಪ್ರತಿಗಾಮಿ, ಜನವಿರೋಧಿ ಸರ್ವಾಧಿಕಾರಿ ಅಲ್ಪ್ವಕೆ ಬಹಳ ದಿನ ಉಳಿಯಲು ಸಾಧ್ಯವಾಗುವುದಿಲ್ಲ ಎಂಬುದನ್ನು ಮಾರ್ಕೋಸ್ ಪಲಾಯನ ಇನ್ನೊಮ್ಮೆ ತೋರಿಸಿಕೊಟ್ಟಿದೆ.

86-87 ರ ಕರ್ನಾಟಕ ಬಜೆಟ್

(2ನೇ ಪುಟದಿಂದ)

ಮ್ಮ ಸ್ವಾಗತಿಸೂಂದಲ, ತವ ಗೊಗುಯ್ಯಾಲಿಯನ್ನು ಗಮನಿಸುತ್ತಲೇ ಕೇಂದ್ರ ಸರಕಾರ ಕಲ್ಲಿದ್ದಲು, ರಸಗೊಬ್ಬರ, ಅಕ್ಕಿ ಗೋಧಿ, ರಾಗಿ, ಪೆಟ್ರೋಲಿಯಂ ವಸ್ತುಗಳ ಬೆಲೆಯನ್ನು ಅಡಳಿತಾತ್ಮಕವಾಗಿ ಏರಿಸಿರುವುದನ್ನು ಖಂಡಿಸಿ ರಾಜ್ಯದ ಪಾಲನ್ನು ಮಂಚಿಸಿದಂತೆ ಎಂದಿರುವುದನ್ನು, ರಾಜ್ಯಮುಖ್ಯಮಂತ್ರಿಗಳ ಜೊತೆ ಈ ಬಗೆಯ ಬುನಾದಿ ಆರ್ಥಿಕ ನಿರ್ಧಾರಗಳನ್ನು ಕೈಗೊಳ್ಳುವಾಗ ಸಮಾಲೋಚನೆ ನಡೆಸಬೇಕು ಎಂದು ಅಗ್ರಹಪಡಿಸಿರುವುದನ್ನು, ಸರ್ಕಾರಿಯ ಆಯೋಗದ ವರದಿ ಕೂಡಲೇ ವಿಳಂಬವಿಲ್ಲದೆ ನೀಡಬೇಕೆಂದು ಒತ್ತಾಯಿಸಿರುವುದನ್ನು ಸ್ವಾಗತಿಸಬೇಕು. ಅದೇ ರೀತಿಯಲ್ಲಿ ರೈತರಿಂದ ಬರಬೇಕಾದ 6 ಕೋಟಿ ರೂ. ಸಾಲ ಮನ್ನಾ ಬರಗಾಲಪೀಡಿತ ಪ್ರದೇಶಗಳ ಸಣ್ಣ ರೈತರಿಗೆ ಬಡ್ಡಿ ವಿನಾಯತಿ ಕೆಲವು ಆಹಾರ ವಸ್ತುಗಳು, ಕೆಲ ಜೀವರಕ್ಷಕ ಔಷಧಗಳು ಇವುಗಳಿಗೆ ನೀಡಿದ ಕರ ವಿನಾಯತಿ ಸ್ವಾಗತಾರ್ಹ

2000 ಇಸವಿಯ ಒಳಗೆ ಕರ್ನಾಟಕದ ಎಲ್ಲ ಜನ ಸಂಪನ್ಮೂಲಗಳನ್ನು ಬಳಸುತ್ತೇವೆ ಎಂಬ ಭ್ರಮೆಯನ್ನು ಒಪ್ಪಲು ಸಾಧ್ಯವಿಲ್ಲದಿದ್ದರೂ ಫೀರಾವರಿಯನ್ನು ತ್ವರಿತಗೊಳಿಸುವುದಕ್ಕಾಗಿ ಹಣ ವಿನಿಯೋಗದ ಹೆಚ್ಚಳ ಸ್ವಾಗತಾರ್ಹ

ಮತ್ತೆ 2000 ಇಸವಿಯ ವೇಳೆಗೆ ಪ್ರತಿ ಕೃಷಿಕ ಕುಟುಂಬವನ್ನು ಅಭಿವೃದ್ಧಿಪಡಿಸಿಬಿಡುವಷ್ಟು ಸಾಲ ನೀಡುತ್ತೇವೆಂದು ಜಿಲ್ಲಾ ಪರಿಷತ್ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಭ್ರಮೆ ಬಿತ್ತುವುದನ್ನು ಖಂಡಿಸುತ್ತಲೇ ರೈತರಿಗೆ ಅಗ್ಗದ ದರದಲ್ಲಿ ಸಾಲ ನೀಡುವ ಯಾವುದೇ ಪ್ರಯತ್ನವನ್ನು ಸ್ವಾಗತಿಸಬೇಕು

ಒಟ್ಟಿನಲ್ಲಿ ರಾಜ್ಯ ಬಜೆಟ್ ಹಿಂದೆ ನಮ್ಮ ರಾಜ್ಯದಲ್ಲಿ ಮಂಡಿತವಾದ ಎಲ್ಲಾ ಬಜೆಟ್‌ಗಳಂತೆ ಕಾಲನ್ನು ಮುಚ್ಚಿದರೆ ಮೈ ತೆರೆದುಕೊಳ್ಳುವ, ಮೈ ಮುಚ್ಚಿದರೆ ಕಾಲು ಬತ್ತಲಾಗುವ ಮೋಟು ಹೊದಿಕೆಯ ಕಸರತ್ತಷ್ಟೇ ಹೊರತು ಯಾವುದೇ ಪರ್ಯಾಯ ಅಭಿವೃದ್ಧಿಯ ಮಾರ್ಗವನ್ನು, ಸ್ಥಗಿತಗೊಂಡ ಅಭಿವೃದ್ಧಿಯನ್ನು ದಾರಿಗೆ ಹಚ್ಚುವ ಮಾರ್ಗವನ್ನು ಕಿಂಚಿತ್ತಾದರೂ ಯೋಚಿಸಿದ ಬಜೆಟ್ ಅಲ್ಲ ಎಂಬುದನ್ನು, ಜನತಾ ಸರ್ಕಾರದ ಬಂಡವಾಳಶಾಹಿ ಭೂಮಾಲಕ ವರ್ಗದ ವರ್ಗಗುಣವನ್ನು ಪ್ರತಿಬಿಂಬಿಸುವ ಬಜೆಟ್ ಎಂಬುದನ್ನು ಸಾರಿ ಹೇಳಬೇಕಾಗಿದೆ.

ಹಿಂದಿನ ವರ್ಷದ ಬಜೆಟ್‌ನಲ್ಲಿ ಕಡಿತ

	85-86 ರ ಬಜೆಟ್	85-86 ರ ಅಂತಿಮ	ಕಡಿತ
	ಕೋಟಿ ರೂಗಳಲ್ಲಿ		
ವೈದ್ಯಕೀಯ	100 98	90 32	-10 66
ಕುಟುಂಬ ಕಲ್ಯಾಣ	33.17	28.41	-4.76
ಗೃಹ ನಿರ್ಮಾಣ	9.41	8 06	-1.35
ಸಣ್ಣ ನೀರಾವರಿ	19.28	18.42	-0.88
ಆಹಾರ	38.14	36.68	-1 46
ಡೇರಿ ಅಭಿವೃದ್ಧಿ	8 00	4 00	-4 00
ಸಹಕಾರ	42 73	17.43	-25.30
ನೀರಾವರಿ	100.56	98.99	-1.50
ರಸ್ತೆ, ಸೇತುವೆಗಳು	48.21	41.78	-6.43

... BGW-148 MAG[2] PRB DECR 319/78-79

ಬೃಹತ್ ಐಕ್ಯ ಚಳುವಳಿಗೆ ಆರಂಭವಿದು - ಇ. ಎಂ. ಎಸ್.

[1ನೇ ಪುಟದಿಂದ]

ಅಖಿಲ ಭಾರತ ಮಟ್ಟದ ಬಂದ್

ಅಖಿಲ ಭಾರತ ಬಂದ್ ವಿನಾಯಿತಿ ನೀಡಿದ್ದ ಆರು ರಾಜ್ಯಗಳು, ಪ್ರದೇಶಗಳ ಹೊರತು ಉಳಿದೆಡೆಯಲ್ಲೆಲ್ಲಾ ಪಡೆದ ಯಶಸ್ಸು ಈಗಾಗಲೇ ನೀವು ಪತ್ರಿಕೆಗಳಲ್ಲಿ ಓದಿದ್ದೀರಿ.

ವಿರೋಧ ಪಕ್ಷಗಳು ಸರ್ಕಾರ ರಚಿಸಿರುವ ಕರ್ನಾಟಕದಲ್ಲಿ, ಆಂಧ್ರ ಪ್ರದೇಶದಲ್ಲಿ, ಎಡ ಪ್ರಜಾಪ್ರಭುತ್ವ ರಂಗ ಪ್ರಬಲವಾಗಿರುವ ಕೇರಳದಲ್ಲಿ ಮಾತ್ರವಲ್ಲ ಕಾಂಗ್ರೆಸ್ [ಐ] ಆಡಳಿತದಲ್ಲಿದ್ದು, ಬಂದನ್ನು ಮುರಿಯಲು ಪ್ರಯತ್ನ ಮಾಡಿದ ಎಲ್ಲಾ ರಾಜ್ಯಗಳಲ್ಲೂ ಮಹಾರಾಷ್ಟ್ರ, ಒರಿಸ್ಸಾ, ಬಿಹಾರ್, ಗುಜರಾತ್, ರಾಜಸ್ಥಾನ್, ಮಧ್ಯಪ್ರದೇಶ, ಉತ್ತರ ಪ್ರದೇಶ ಹಿಮಾಚಲ ಪ್ರದೇಶ, ಗೋವಾ, ಮೇಘಾಲಯ ಮಣಿಪುರ ಮೊದಲಾದ ರಾಜ್ಯಗಳಲ್ಲಿಯೂ ಬಂದ್ ಯಶಸ್ವಿಯಾಗಿದೆ.

ದೇಶದಲ್ಲೆಡೆ ಮುಷ್ಕರ ಹೂಡಿದ್ದ ಸರ್ಕಾರಿ ನೌಕರರು ಕಛೇರಿಗಳಿಗೆ ಹಾಜರಾಗಿಲ್ಲ. ಬ್ಯಾಂಕ್, ಎಲ್. ಐ. ಸಿ. ಮೊದಲಾದ ಕೇಂದ್ರ ಸರ್ಕಾರಿ ಕಛೇರಿಗಳು ಕೆಲಸ ಮಾಡಲಾಗಲಿಲ್ಲ. ರಿಸರ್ವ್ ಬ್ಯಾಂಕ್‌ನ ವ್ಯವಹಾರವೂ ನಡೆಯಲಿಲ್ಲ. ಹೀಗೆ ವ್ಯಾಪಕವಾದ ಪ್ರತಿಭಟನೆ ವ್ಯಕ್ತವಾಗಿದೆ.

ಅಸ್ಸಾಂನಲ್ಲಿ

ಅಸ್ಸಾಂನ ಬಗ್ಗೆ ಪ್ರತ್ಯೇಕವಾಗಿ ಹೇಳಲೇಬೇಕು. ಮೊನ್ನೆ ತಾನೆ ಗೆದ್ದು ಆಡಳಿತ ನಡೆಸುತ್ತಿರುವ ಅಸ್ಸಾಂ ಗಣ ಪರಿಷದ್ ಈ ಬಂದ್‌ಗೆ ಬೆಂಬಲ ನೀಡದಿದ್ದರೂ, ಬೆಂಬಲ ನೀಡುವುದಿರಲಿ ಅವರ ಬೆಂಬಲಿಗರು ಅಂಗಡಿಗಳನ್ನು ಮುಚ್ಚಬೇಡಿ ಎಂದು ಎಲ್ಲ ಕಡೆ ಪ್ರಚಾರ ಮಾಡುತ್ತಾ, ಬೆದರಿಸುತ್ತಾ ನಡೆದರೂ, ಅದರ ಬಲದ ಮೂಲ ಕೇಂದ್ರವಾದ ಗೌಹಾಟಿಯಲ್ಲಿ ಮುಖ್ಯ ಮಾರುಕಟ್ಟೆಗಳೆಲ್ಲಾ ಮುಚ್ಚಿದ್ದು ಬ್ಯಾಂಕ್‌ಗಳು ಕೆಲಸ ಮಾಡಲಿಲ್ಲ. 5-10 ವರ್ಷಗಳ ಕಾಲ ಅನೇಕ ಜನ ವಿರೋಧಿ ಬಂದ್‌ಗಳನ್ನು ಸಂಘಟಿಸಿದ್ದ ಈ ಪಕ್ಷ ದೇಶಾದ್ಯಂತ ಜನರನ್ನು ಪೀಡಿಸುವ ಪ್ರಶ್ನೆಯಲ್ಲಿ "ಬಂದ್" ವಿರೋಧಿಯಾಗಿ ಪ್ರವರ್ತಿಸಿದೆ

ಕಾಂ. ಇ. ಎಂ. ಎಸ್ ಭಾಷಣ

ದೆಹಲಿಯಲ್ಲಿ ಬಂದ್ ಇಲ್ಲದಿದ್ದರೂ, ವಿರೋಧ ಪಕ್ಷಗಳೆಲ್ಲಾ ಸೇರಿ ಬೋಟ್ ಕ್ಲಬ್‌ನಲ್ಲಿ ಏರ್ಪಡಿಸಿದ್ದ ರ್‍ಯಾಲಿ ಅಸಂಖ್ಯಾತ ಜನರನ್ನು ಆಕರ್ಷಿಸಿತು. ಈ ಸಭೆ ಸರ್ವಾನುಮತದಿಂದ ಅಂಗೀಕರಿಸಿದ ನಿರ್ಣಯ ಸರ್ಕಾರದ ಈ ಕ್ರಮ ಜನ ವಿರೋಧಿ ಹಾಗೂ ಹಣದುಬ್ಬರಕ್ಕೆಎಡೆ ಮಾಡಿಕೊಡುವಂತಹದ್ದು ಲೋಕಸಭೆಯ ಬಜೆಟ್ ಅಧಿವೇಶನಕ್ಕೆ ಮೊದಲು ಮಾಡಿದ ಈ ಬೆಲೆ ಏರಿಕೆ ಅನೀತಿಯುತ ಮಾತ್ರವೇ ಅಲ್ಲ, ಸಂಸದೀಯ ಪರಂಪರೆಯ ಅಪಮೌಲ್ಯವಾಗಿದೆ ಎಂದು ಹೇಳುತ್ತದೆ. ಈ ಸಭೆಯಲ್ಲಿ ವಿರೋಧ ಪಕ್ಷಗಳ ನಾಯಕರಾದ ಕಾಂ. ಇ. ಎಂ. ಎಸ್. ನಂಬೂದಿಪಾದ್ ರವರಲ್ಲದೆ ಕಾಂ. ಇಂದ್ರಜಿತ್‌ಗುಪ್ತ [ಸಿಪಿಐ], ಮಧುದಂಡವತೆ (ಜನತಾ) ಅಂಬಿಕಾ ಸೋನಿ [ಕಾಂಗ್ರೆಸ್ ಎಸ್], ಎಲ್ ಕೆ ಅಡ್ವಾನಿ, [ಬಿ ಜೆ ಪಿ], ಪಿ ಉಪೇಂದ್ರ (ತೆಲುಗು ದೇಶಂ), ಎಚ್ ಎನ್ ಬಹುಗುಣ [ಲೋಕದಳ] ಮಾತನಾಡಿದರು.

ಕಾಂ. ಇ ಎಂ ಎಸ್. ನಂಬೂದಿರಿಪಾದ್‌ರವರು ಮಾತನಾಡುತ್ತಾ, ಕೇಂದ್ರ ಸರ್ಕಾರದ ಬೆಲೆ ಏರಿಕೆ ಕ್ರಮಗಳು ರಾಷ್ಟ್ರಾದ್ಯಂತ ಜನಸಮೂಹಗಳ ಹಾಗೂ ರಾಜಕೀಯ ಪಕ್ಷಗಳ ಸ್ವಯಂಪ್ರೇರಿತ ಬೆಂಬಲವನ್ನು ಪಡೆದಿವೆ. ಈ ರಾಷ್ಟ್ರವ್ಯಾಪಿ ಬಂದ್‌ನ ಯಶಸ್ಸು ಬೃಹತ್ ಐಕ್ಯ ಚಳುವಳಿಯ ಆರಂಭಕ್ಕೆ ಮುನ್ಸೂಚಿ ಎಂದು ಹೇಳಿದರು.

FORM IV
(See Rule 8)

1. Place of Publication	:	BANGALORE
2. Periodicity of its Publication	:	WEEKLY
3. Printer's Name	:	P. RAMACHANDRA RAO
Whether citizen of India?	:	YES
Address	:	L-56, K.V. Temple Street, Sultanpet, Bangalore-53.
4. Publisher's Name	:	P. RAMACHANDRA RAO
Whether citizen of India ?	:	YES
Address	:	L-56 K. V. Temple Street, Sultanpet, Bangalore-53.
5. Editor's Name	:	P. RAMACHANDRA RAO
Whether citizen of India ?	:	YES
Address	:	L-56, K. V. Temple Street, Sultanpet, Bangalore-53.
Names and addresses of individuals who own the News Paper and Partners or Share holders holding more than one percent of the total capital.		Communist Party of India. (Marxist) Karnataka State Committee, K. V. Temple Street, Sultanpet, B'lore-53.

I, P. RAMACHANDRA RAO hereby declare that the Particulars given above are true to the best of my knowledge and belief.

2-3-86

P. RAMACHANDRA RAO
Signature of Publisher

ಒತ್ತಾಯಗಳು

1. ತಿಂಗಳಿಗೆ 500 ರೂ ಕನಿಷ್ಟ ಕೂಲಿ
2. ಪ್ರತಿಪಾಯಿಂಟಿಗೆ ರೂ 1.30 ತುಟ್ಟಿಭತ್ಯ
3. ಹನ್ನೆರಡು ತಿಂಗಳೂ ಕೆಲಸ

[1ನೇ ಪುಟದಿಂದ]

ಕನಿಷ್ಟ ಕೂಲಿಯನ್ನು ನ್ಯಾಯಬದ್ಧವಾಗಿ ನಿಗದಿಗೊಳಿಸಲು ಕನಿಷ್ಠ ಕೂಲಿ ಸಲಹಾ ಸಮಿತಿಯಲ್ಲಿದ್ದ ಸಿಐಟಿಯು, ಕರ್ನಾಟಕ ಪ್ರಾಂತ ರೈತ ಸಂಘದ ಪ್ರತಿನಿಧಿಗಳು ಹೋರಾಟ ಮಾಡಿದರು ಆ ಸಮಿತಿಯ ಸಲಹೆಗಳನ್ನು ಕಡೆಗಣಿಸಿದ್ದಕ್ಕಾಗಿ, ವಿಳಂಬ ಮಾಡಿದ್ದಕ್ಕಾಗಿ ಕಾಂ|| ಸೂರ್ಯನಾರಾಯಣರಾವ್‌ರವರು 84 ರ ಏಪ್ರಿಲ್ 9 ರಿಂದ 4 ದಿನಗಳ ಉಪವಾಸ ಸತ್ಯಾಗ್ರಹ ಮಾಡಿದರು ಪಕ್ಷದ ಶಾಸಕರು ವಿಧಾನ ಸಭೆಯಲ್ಲಿ ಕಾರ್ಮಿಕ ಮಂತ್ರಿಗಳಿಂದ ವಾಗ್ದಾನ ಪಡೆದರು ಇಷ್ಟೆಲ್ಲಾ ಆದ ಮೇಲೆಯೇ ವಿವಿಧ ಕೈಗಾರಿಕೆಗಳಿಗೆ ಸಂಬಂಧಿಸಿ ಗೆಜೆಟ್ ಪ್ರಕಟಣೆಗಳು ಒಂದೊಂದಾಗಿ ಹೊರ ಬಂದವು.

ಆಗಸ್ಟ್ 9 ರ ಬೃಹತ್ ಚಳುವಳಿ

ಇಷ್ಟಾದರೂ ನ್ಯಾಯಬದ್ಧ ಕನಿಷ್ಟ ಕೂಲಿ ಜಾರಿಯಾಗಲಿಲ್ಲ. ಆಗಸ್ಟ್ 9 ರಂದು ಸಂಘಟಿತ ಕಾರ್ಮಿಕರು ಅಸಂಘಟಿತ ಕಾರ್ಮಿಕರ ಬೇಡಿಕೆಗಳಿಗಾಗಿ ಅಪೂರ್ವ ಹೋರಾಟ ಮಾಡಿದ್ದು ಕರ್ನಾಟಕದ ಹೋರಾಟಗಳ ಚರಿತ್ರೆಯಲ್ಲಿ ದಾಖಲಾಯಿತು. 30,000 ಕ್ಕೂ ಅಧಿಕ ಮಂದಿ ರಾಜ್ಯ ಸರಕಾರಿ ಕಛೇರಿಗಳ ಪಿಕೆಟಿಂಗ್ ಮಾಡಿ ದಸ್ತಗಿರಿಯಾದರು. 5 ಲಕ್ಷಕ್ಕೂ ಅಧಿಕ ಮಂದಿ ಕಾರ್ಮಿಕರು ಮುಷ್ಕರ ಹೂಡಿದರು

ಈ ಎಲ್ಲಾ ಹೋರಾಟಗಳನ್ನು ಮುಂದೊಯ್ಯಲು ಈ ಕಾರ್ಮಿಕರ ಒತ್ತಾಯಗಳನ್ನು ಈಡೇರಿಸುವಂತೆ ಜನತಾ ಸರಕಾರದ ಮೇಲೆ ಒತ್ತಡ ತರುವ ಮುಂದಿನ ಹೆಜ್ಜೆಯಾಗಿ ಮಾರ್ಚ್ ಮೂರರಂದು "ವಿಧಾನ ಸೌಧ ಚಲೋ" ಎಂಬ ಸಮರಶೀಲ ಕರೆಯನ್ನು ಸಿ ಐ ಟಿ ಯು. ಮೊಳಗಿಸಿದೆ. ಈ ಕರೆಯನ್ನು ಯಶಸ್ವಿಗೊಳಿಸಿ ಎಂದು ಕೋರುತ್ತೇವೆ

ಕರ್ನಾಟಕದ ಕಾಲು ಭಾಗ ಜನತೆಯನ್ನು ಬಾಧಿಸುವ ಅವರ ಜೀವನವನ್ನು ಉತ್ತಮಪಡಿಸುವ ಈ ಪ್ರಶ್ನೆಯಲ್ಲಿ ರಾಜ್ಯದ ಇಡೀ ಆರ್ಥಿಕತೆಯ ಪ್ರಶ್ನೆ ಅಡಗಿದೆ ಎಂಬುದನ್ನು ಕರ್ನಾಟಕ ಸರಕಾರ ಪರಿಗಣಿಸಿ ಈ ಒತ್ತಾಯಗಳನ್ನು ಈಡೇರಿಸಬೇಕು.

[1ನೇ ಪುಟದಿಂದ]

ಮೂರು ಚಕ್ರದ, ನಾಲ್ಕು ಚಕ್ರದ ವಾಹನಗಳು, ಬಸ್‌ಗಳು, ಪ್ರವಾಸಿ ವಾಹನ, ಟ್ಯಾಕ್ಸಿ, ರಿಕ್ಷಾಗಳು ರಸ್ತೆಯಲ್ಲಿರಲಿಲ್ಲ. ಅಂಗಡಿಗಳು ಹೋಟೆಲುಗಳು ಸಂಪೂರ್ಣವಾಗಿ ಮುಚ್ಚಿದ್ದುವು. ಜಿಲ್ಲಾ ಕಾರ್ಯದರ್ಶಿ ಕಾಂ. ಕೆ ಆರ್. ಶ್ರೀಯಾನ್ ಸಿ. ಐ. ಟಿ. ಯು. ಕಾರ್ಯದರ್ಶಿ ಕೆ. ಮೂಸಬ್ಬ, ಬಂದ್ ಯಶಸ್ವಿಗೊಳಿಸಿದ ಕಾರ್ಮಿಕರಿಗೆ, ನಾಗರಿಕರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಇದಕ್ಕೆ ಪೂರ್ವ ಭಾವಿಯಾಗಿ, 14 ವಿರೋಧ ಪಕ್ಷಗಳ ಕರೆಯಂತೆ 20-2-86 ರಂದು ಮಂಗಳೂರಿನಲ್ಲಿ ನಾಲ್ಕು ವಿರೋಧ ಪಕ್ಷಗಳು ಕೂಡಿ ಪ್ರತಿಭಟನೆ ಮಾಡಿ, ಬಹಿರಂಗ ಸಭೆ ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ಕಾ|| ಕೆ. ಆರ್. ಶ್ರೀಯಾನ್ ಸಿಪಿಐ (ಎಂ) ಪರವಾಗಿ, ಕಾ|| ಎಚ್. ಉಮಾನಾಥ ನಾಯಕ್ ಸಿಪಿಐ ಪರವಾಗಿ, ಮಾಜಿ ಶಾಸಕರುಗಳಾದ ಬಿಜೆಪಿಯರ ಧನಂಜಯ ಕುಮಾರ್, ಜನತಾದ ಲೋಕಯ್ಯಶೆಟ್ಟಿ ಮಾತನಾಡಿದರು. ಈ ಸಭೆಯ ಅಧ್ಯಕ್ಷತೆಯನ್ನು ಜನತಾ ಪಕ್ಷದ ಮೋಹನದಾಸ್ ಹೆಗ್ಡೆ ವಹಿಸಿದ್ದರೆ ಸಿಪಿಐ (ಎಂ) ನ ಕೆ. ಮೂಸಬ್ಬ ಸ್ವಾಗತಿಸಿದರು. ಅದೇ ದಿನ ಸಿಪಿಐ (ಎಂ) ಉಡುಪಿ, ಕುಂದಾಪುರದಲ್ಲಿ ಪ್ರತಿಭಟನಾ ಸಭೆ ಏರ್ಪಡಿಸಲಾಗಿತ್ತು.

ರೈಲು ತಡೆ, ಬಂಧನ

ರಾಜ್ಯದಲ್ಲಿ ಅನೇಕ ಕಡೆ ಪಕ್ಷದ ಕಾರ್ಯಕರ್ತರೂ ಸೇರಿದಂತೆ ವಿರೋಧ ಪಕ್ಷಗಳ ಕಾರ್ಯಕರ್ತರು ರೈಲು ತಡೆ ಮಾಡಿ ಬಂಧನಕ್ಕೊಳಗಾಗಿದ್ದಾರೆ ಬಂಗಾರ ಪೇಟೆಯಲ್ಲಿ ರೈಲು ತಡೆಯ ನೇತೃತ್ವವನ್ನು ಪಕ್ಷದ ಶಾಸಕ .ಟಿ ಎಸ್. ಮಣಿಯವರೂ, ಎಂ. ಪಿ. ಡಾ|| ವೆಂಕಟೇಶ್‌ರವರೂ ವಹಿಸಿ ಬಂಧನಕ್ಕೊಳಗಾದರು. ಅದೇ ರೀತಿ, ಶಿಪಟೂರು, ಬಿಜಾಪುರ, ಬಳ್ಳಾರಿ, ಹುಬ್ಬಳ್ಳಿಗಳಲ್ಲಿ, ದಾವಣಗೆರೆ, ತರೀಕೆರೆಗಳಲ್ಲಿ ರೈಲು ತಡೆ ಮಾಡಿದ ವಿರೋಧ ಪಕ್ಷಗಳ ಕಾರ್ಯಕರ್ತರನ್ನು ಬಂಧಿಸಿದ್ದಾರೆ.

Printed & Published by P. Ramachandra Rao on behalf of the Communist Party of India (Mrxist)KarnatakaState Committee, K. V, Temple Street, Sultanpet, Bangalore-560053 Editorial and manageriel office, L-56, K. V. TempleStreet, Sultanpet, B-53Phone : 75331
Editor P. Ramach andra Rao Managing Editor : N.K. Upadhyaya